ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

**ಪಟ್ಟಿ – ೯**

ಒಟ್ಟು ಪ್ರಶ್ನೆಗಳು – ೧೧೪

# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತನೆಯ ಅಧಿವೇಶನ**
**(ಮುಂದುವರೆದ ಉಪವೇಶನ)**

**ಸೋಮವಾರ, ದಿನಾಂಕ : ೨೮ನೇ ಮಾರ್ಚ್, ೨೦೧೬**

---

## ಸಮೂಹ – I

೧. ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.

೨. ಸಾರಿಗೆ ಸಚಿವರು.

೩. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

೪. ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

೫. ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು.

೬. ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು.

೭. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

---

## ಆರೋಗ್ಯ ಇಲಾಖೆಯಡಿ ಬರುವ ಉಚಿತ ವೈದ್ಯಕೀಯ ಸೌಲಭ್ಯಗಳ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೮೩೫(೧೦೫೫) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಆರೋಗ್ಯ ಇಲಾಖೆಯಡಿಯಲ್ಲಿ ಉಚಿತ ವೈದ್ಯಕೀಯ ಚಿಕಿತ್ಸೆ ಕುರಿತು ಇರುವಂತಹ ಯೋಜನೆಗಳು ಯಾವುವು ; ಹಾಗೂ ಈ ಯೋಜನೆಗಳನ್ನು ಪಡೆದುಕೊಳ್ಳಲು ಇರುವ ನಿಯಮಗಳೇನು ; (ಯೋಜನೆವಾರು ವಿವರ ನೀಡುವುದು)

(ಆ) ಉಚಿತ ಆರೋಗ್ಯ ಸೌಲಭ್ಯಕ್ಕಾಗಿ ಕೇಂದ್ರ ಸರ್ಕಾರದ ಪ್ರಾಯೋಜಿತ ಹಾಗೂ ರಾಜ್ಯ ಸರ್ಕಾರದ ಪ್ರಾಯೋಜಿತ ಯೋಜನೆಗಳಾವುವು ; (ವಿವರ ನೀಡುವುದು)

(ಇ) ಅನುದಾನಿತ ಹಾಗೂ ಅನುದಾನ ರಹಿತ ಶಿಕ್ಷಕರಿಗಾಗಿ ಎ.ಪಿ.ಎಲ್ ಕಾರ್ಡ್ ಹೊಂದಿರುವವರಿಗಾಗಿ ಇರುವ ಯೋಜನೆಗಳು ಯಾವುವು ; ಹಾಗೂ ಬಿ.ಪಿ.ಎಲ್. ಕಾರ್ಡ್ ಹೊಂದಿರುವವರಿಗಾಗಿ ಇರುವ ಯೋಜನೆಗಳಾವುವು ;

(ಈ) ಎ.ಪಿ.ಎಲ್ ಕಾರ್ಡ್ ಅಡಿ ಯೋಜನೆಗಳನ್ನು ಅನುದಾನಿತ ಹಾಗೂ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳಿಗೆ ನೀಡಲು ಸರ್ಕಾರ ತೀರ್ಮಾನ ಕೈಗೊಳ್ಳುವುದೇ ? (ವಿವರ ನೀಡುವುದು)

## ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಚಿತ್ರಕಲಾ ಶಿಕ್ಷಕರ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೮೪೦(೧೦೬೧) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯಲ್ಲಿ ಬೋಧಿಸುತ್ತಿರುವ ಚಿತ್ರಕಲಾ ಶಿಕ್ಷಕರಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಏನು ;

(ಆ) ಎಷ್ಟು ಜನ ಚಿತ್ರಕಲಾ ಶಿಕ್ಷಕರು ಯಾವ ಯಾವ ವಿದ್ಯಾರ್ಹತೆಯೊಂದಿಗೆ ಕಾರ್ಯನಿರ್ವಹಿಸುತ್ತಿದ್ದಾರೆ ? (ಪ್ರತಿಯೊಬ್ಬರ ವಿವರಣೆ ನೀಡುವುದು)

## ಮೊರಾರ್ಜಿ ದೇಸಾಯಿ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ಶಾಲೆಗಳ ಸಿಬ್ಬಂದಿಗಳ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೮೪೧(೧೦೬೦) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:–

ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಹಾಗೂ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಗಳಲ್ಲಿರುವ ಮೊರಾರ್ಜಿ ದೇಸಾಯಿ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕರ ಸಂಖ್ಯೆ ಎಷ್ಟು ; (ಬೋಧಕರ ಹೆಸರು, ಬೋದಿಸುವ ವಿಷಯ ಹಾಗೂ ಅವರುಗಳನ್ನು ಸಂಪರ್ಕಿಸಲು ವಿಳಾಸ ಸಹಿತ ದೂರವಾಣಿ ಸಂಖ್ಯೆಯ ಸಂಪೂರ್ಣ ವಿವರ ನೀಡುವುದು)

## ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳ ವೈದ್ಯಕೀಯ ಕಾಲೇಜುಗಳ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೮೪೨(೧೦೬೨) ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿರುವ ವೈದ್ಯಕೀಯ ಕಾಲೇಜುಗಳೆಷ್ಟು ; (ಹೆಸರು, ವಿಳಾಸ ಹಾಗೂ ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕರ ಹೆಸರು, ಬೋಧಿಸುವ ವಿಷಯ ಹಾಗೂ ಅವರುಗಳನ್ನು ಸಂಪರ್ಕಿಸುವ ವಿಳಾಸ ಸಹಿತ ಸಂಪೂರ್ಣ ವಿವರ ನೀಡುವುದು)

(ಆ) ಈ ಮೂರು ಜಿಲ್ಲೆಗಳಲ್ಲಿರುವ ಆಯುರ್ವೇದ ಹಾಗೂ ಯುನಾನಿ ವೈದ್ಯಕೀಯ ಕಾಲೇಜುಗಳೆಷ್ಟು ? (ಹೆಸರು, ವಿಳಾಸ ಹಾಗೂ ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕರ ಹೆಸರು, ಬೋಧಿಸುವ ವಿಷಯ ಹಾಗೂ ಅವರುಗಳನ್ನು ಸಂಪರ್ಕಿಸುವ ವಿಳಾಸ ಸಹಿತ ಸಂಪೂರ್ಣ ವಿವರ ನೀಡುವುದು)

## ಮಂಡ್ಯದಲ್ಲಿ ಅಂಬೇಡ್ಕರ್ ಭವನ ನಿರ್ಮಾಣದ ಬಗ್ಗೆ

**ಶ್ರೀ ಅಶ್ವತ್‍ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೪೩(೧೦೦೩) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆಯ ಮಂಡ್ಯ ನಗರದಲ್ಲಿ ಡಾ:ಅಂಬೇಡ್ಕರ್ ಭವನ ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ ; ಇದಕ್ಕಾಗಿ ಬಿಡುಗಡೆ ಮಾಡಿದ ಹಣವೆಷ್ಟು ; ಯಾವಾಗ ಬಿಡುಗಡೆ ಮಾಡಲಾಗಿದೆ ; ಭವನ ನಿರ್ಮಾಣ ಕಾರ್ಯ ಸ್ಥಗಿತಗೊಂಡಾಗ ಬಾಕಿ ಹಣ ಬಿಡುಗಡೆ ಮಾಡುವುದಾಗಿ ತಿಳಿಸಿದ್ದಾರೆ. ಬಾಕಿ ಹಣವನ್ನು ಬಿಡುಗಡೆ ಮಾಡಲಾಗಿರುವುದೇ ; ಮಾಡದಿದ್ದರೆ ಬಿಡುಗಡೆ ಮಾಡಲು ಇರುವ ತೊಂದರೆ ಏನು ;

(ಆ) ಡಾ:ಅಂಬೇಡ್ಕರ್ ಭವನ ನಿರ್ಮಾಣ ಕಾಮಗಾರಿಯು ಯಾವಾಗ ಪೂರ್ಣಗೊಳ್ಳಲಿದೆ ; ಯಾವಾಗ ಲೋಕಾರ್ಪಣೆ ಮಾಡಲಾಗುವುದು ?

## **ಕಾರ್ಮಿಕ ಕಲ್ಯಾಣ ಮಂಡಳಿ ಬಗ್ಗೆ**

**ಶ್ರೀ ಅಶ್ವತ್‌ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೪೪(೧೦೮೫) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಾರ್ಮಿಕ ಕಲ್ಯಾಣ ಮಂಡಳಿಯಿಂದ ಮಹಿಳಾ ಉದ್ಯೋಗಿಗಳ ಕಲ್ಯಾಣಕ್ಕಾಗಿ ರೂಪಿಸಿರುವ ಯೋಜನೆಗಳು ಯಾವುವು ; ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಮಹಿಳಾ ಉದ್ಯೋಗಿಗಳ ಕಲ್ಯಾಣಕ್ಕಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ;

(ಆ) ರಾಜ್ಯದಲ್ಲಿ ಬಾಲ ಕಾರ್ಮಿಕರ ಪುನರ್ವಸತಿಗಾಗಿ ಕರ್ನಾಟಕ ಚೈಲ್ಡ್ ಲೇಬರ್ ಇರಾಡಿಕೇಷನ್ ಪ್ರಾಜೆಕ್ಟ್ ಸೊಸೈಟಿಗೆ UNICEF/ILO ಮತ್ತು ಕೇಂದ್ರ ಸರ್ಕಾರದಿಂದ ಕಳೆದ ೫ ವರ್ಷದಿಂದ ಬಂದಿರುವ ಹಣವೆಷ್ಟು ; ಬಂದ ಹಣದಲ್ಲಿ ಸರ್ಕಾರ ರೂಪಿಸಿರುವ ಯೋಜನೆಗಳು ಯಾವುವು ; ಇದಕ್ಕಾಗಿ ಖರ್ಚಾದ ಹಣವೆಷ್ಟು ?

## **ರಂಗಭೂಮಿ ಪಿತಾಮಹ ದಿ:ಕಾರಂತರ ರಂಗಮಂದಿರದ ಬಗ್ಗೆ**

**ಶ್ರೀ ಅಶ್ವತ್‌ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೪೫(೧೦೦೨) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಂಗಭೂಮಿ ಪಿತಾಮಹ ದಿ:ಬಿ.ವಿ.ಕಾರಂತರು ಸ್ಥಾಪಿಸಿದ "ರಂಗಾಯಣ" ರಾಜ್ಯದಲ್ಲಿ ಯಾವ ಯಾವ ಭಾಗಗಳಲ್ಲಿ ರಂಗ ಚುಟುವಟಿಕೆ ನಡೆಸಲು ಪ್ರಾರಂಭಿಸಲಾಗಿದೆ ; ಪ್ರತಿ ರಂಗಯಾಣದ

ತಂಡಕ್ಕೆ (ಸಂಸ್ಥೆ) ಇರುವ ಸೌಲಭ್ಯಗಳೇನು ; ರಂಗಾಯಣದ ಪ್ರತಿ ವಿಭಾಗದಲ್ಲಿ ಇರುವ ನಿರ್ದೇಶಕರು, ಕಲಾವಿದರು, ಸಂಗೀತಗಾರರು, ತಂತ್ರಜ್ಞರು, ಸೌಲಭ್ಯಗಳು, ಪರಿಕರಗಳು, ಕಂಪ್ಯೂಟರ್ ಇತ್ಯಾದಿ ನೀಡಲಾಗಿರುವುದೇ ; ಪ್ರತಿ "ರಂಗಾಯಣ" ಕೇಂದ್ರಕ್ಕೆ /ತಂಡಕ್ಕೆ ಬಿಡುಗಡೆ ಮಾಡಿರುವ ಹಣವೆಷ್ಟು ; ಈ ಸಂಸ್ಥೆಯಲ್ಲಿರುವ ಯೋಜನೆ, ಕಾರ್ಯಕ್ರಮ, ತರಬೇತಿ ಶಿಬಿರ ಹಾಗೂ ಚಟುವಟಿಕೆಗಳು ಯಾವುವು ; (ವಿವರ ನೀಡುವುದು)

(ಆ) ೨೦೧೪ನೇ ಜೂನ್ ೧೭ರಂದು "ಕನ್ನಡ ಸಾಹಿತ್ಯ ಪರಿಷತ್" ಶತಮಾನೋತ್ಸವ ಭವನಕ್ಕೆ ಶಂಕು ಸ್ಥಾಪನೆಯನ್ನು ಮಾನ್ಯ ಮುಖ್ಯಮಂತ್ರಿಗಳು ನೆರವೇರಿಸಿದ್ದರೂ ಇದುವರೆವಿಗೂ ಕಾಮಗಾರಿ ಪ್ರಾರಂಭವಾಗದಿರಲು ಕಾರಣವೇನು ; ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸಾಹಿತ್ಯ ಪರಿಷತ್ ಜವಾಬ್ದಾರಿ ಏನು ; ಅಥವಾ ಯಾವ ಇಲಾಖೆಗೆ ಜವಾಬ್ದಾರಿ ನೀಡಲಾಗಿದೆ ;

(ಇ) ಶತಮಾನೋತ್ಸವ ಭವನ ನಿರ್ಮಾಣ ಮಾಡಲು ಉದ್ದೇಶಿಸಿರುವ ಜಾಗ ಸೂಕ್ತವಾಗಿರುವುದೇ ; ಹಾಲಿ ಇರುವ ಕೃಷ್ಣರಾಜ ಪರಿಷತ್ ಮಂದಿರದ ಹಿಂಭಾಗದಲ್ಲಿ ಶತಮಾನೋತ್ಸವ ಭವನ ನಿರ್ಮಾಣ ಮಾಡಲು ಹೊರಟಿರುವುದು ಸೂಕ್ತವಾದ ಸ್ಥಳವೇ ; ಬೆಂಗಳೂರಿನಲ್ಲಿ ಉತ್ತಮವಾದ ಜಾಗ ನೀಡಿ ಭವನ ನಿರ್ಮಾಣ ಮಾಡಲು ಪರಿಷತ್ ಮುಖೇನ ಚರ್ಚಿಸಿ ತೀರ್ಮಾನಿಸಬಹುದಲ್ಲವೆ ?

## ವಿಕ್ಟೋರಿಯಾ ವಾಣಿ ವಿಲಾಸ ಆಸ್ಪತ್ರೆಗಳ ಸಿಬ್ಬಂದಿಗಳ ಬಗ್ಗೆ

**ಶ್ರೀ ಅಶ್ವತ್‌ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೪೬(೧೦೮೩) ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರಿನ ವಿಕ್ಟೋರಿಯಾ, ವಾಣಿವಿಲಾಸ, ಬೋರಿಂಗ್,ಲೇಡಿ ಕರ್ಜನ್ ಮತ್ತು ಇತರೆ ಸರ್ಕಾರಿ ವೈದ್ಯಕೀಯ ಆಸ್ಪತ್ರೆಗಳಲ್ಲಿ ಒಳರೋಗಿಗಳು ವಿಭಾಗ, ಹೊರರೋಗಿಗಳ ವಿಭಾಗ, ತುರ್ತು ವಿಭಾಗಗಳಲ್ಲಿ ರೋಗಿಗಳ ಸೇವೆಯನ್ನು ಮಾಡುತ್ತಿರುವ ಸಿಬ್ಬಂದಿಗಳಾದ ವಾರ್ಡ್ ಬಾಯ್ಸ್‌ಗಳು, ನರ್ಸ್‌ಗಳು (ಪುರುಷರು ಮತ್ತು ಮಹಿಳೆಯರು) 'ಡಿ' ಗ್ರೂಪ್ ನೌಕರರು ಇವರಿಗೆ ಶೂ, ಗ್ಲೌಸ್ ಮತ್ತು ಸಮವಸ್ತ್ರ, ಕಡ್ಡಾಯವಾಗಿರುತ್ತದೆಯೇ ;

(ಆ) ಈ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಮತ್ತು ರೋಗಿಯ ಸಂಬಂಧಿಕರಿಗೆ ಆಸ್ಪತ್ರೆಯ ಸಿಬ್ಬಂದಿಗಳು ಯಾರು ಎಂಬ ಗೊಂದಲ ಉಂಟಾಗುತ್ತಿರುವುದರಿಂದ ಅಲ್ಲಿನ ಸಿಬ್ಬಂದಿಗಳಿಗೆ ಸಮವಸ್ತ್ರವನ್ನು ಕಡ್ಡಾಯಗೊಳಿಸುವುದು ಸೂಕ್ತವಲ್ಲವೇ ;

(ಇ) ವೈದ್ಯಕೀಯ ಸಚಿವರು ದಿಡೀರ್ ಭೇಟಿ ನೀಡಿ ಅಲ್ಲಿನ ವಾಸ್ತವ ಸ್ಥಿತಿ ತಿಳಿಯಬಹುದಲ್ಲವೇ ?

## ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಸಿಬ್ಬಂದಿ ಮತ್ತು ಅನುದಾನದ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೮೪೭(೧೦೬೫) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಸಿಬ್ಬಂದಿಗಳ ಕೊರತೆ ಹಾಗೂ ಅನುಷ್ಠಾನಗಳ ಇಲಾಖೆಗಳಲ್ಲಿ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದ್ದರೆ, ಸಂಪೂರ್ಣ ಮಾಹಿತಿ ನೀಡುವುದು ;

(ಆ) ಸದರಿ ಮಂಡಳಿಗೆ ಪ್ರತಿ ವರ್ಷ ಸುಮಾರು ೧೦೦೦ ಕೋಟಿ ರೂ.ಗಳು ಅನುದಾನವು ಸದ್ಬಳಕೆಯಾಗದೇ ಕಾಮಗಾರಿಗಳು ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದ್ದರೆ, ಕಳೆದ ಮೂರು ವರ್ಷಗಳಲ್ಲಿ ಮಂಜೂರಾದ ಕಾಮಗಾರಿಗಳು ಎಷ್ಟು ; ಪೂರ್ಣಗೊಂಡ ಕಾಮಗಾರಿಗಳೆಷ್ಟು ; (ವರ್ಷವಾರು ಹಾಗೂ ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಈ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ವ್ಯಾಪ್ತಿಯ ಆರು ಜಿಲ್ಲೆಗಳಲ್ಲಿ ತನ್ನದೆ ಆದಂತಹ ವಿಭಾಗೀಯ ಕಾರ್ಯಾಲಯಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಸಿಬ್ಬಂದಿ ಹಾಗೂ ತಾಂತ್ರಿಕ ಸಿಬ್ಬಂದಿಗಳನ್ನು ನೇಮಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ ? (ಸಂಪೂರ್ಣ ವಿವರ ನೀಡುವುದು)

## ರಾಜ್ಯದಲ್ಲಿ 'ಅನ್ನಭಾಗ್ಯ' ಯೋಜನೆಯ ಅಕ್ಕಿಯ ಜೊತೆ ಚೀನಾ ಪ್ಲಾಸ್ಟಿಕ್ ಅಕ್ಕಿ ಮಿಶ್ರಣ ಮಾಡಿ ವಿತರಿಸುತ್ತಿರುವ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೮೪೮(೧೦೬೪) ಮಾನ್ಯ ಆಹಾರ, ಮತ್ತು ನಾಗರಿಕ ಸರಬರಾಜು ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ 'ಅನ್ನಭಾಗ್ಯ' ಯೋಜನೆಯಡಿಯಲ್ಲಿ ಪಡಿತದಾರರಿಗೆ ವಿತರಿಸಲಾಗುವ ಅಕ್ಕಿಯ ಜೊತೆಯಲ್ಲಿ ಚೀನಾ ಪ್ಲಾಸ್ಟಿಕ್ ಅಕ್ಕಿ ಮಿಶ್ರಣ ಮಾಡಿ ಗ್ರಾಹಕರಿಗೆ ವಿತರಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಇಂತಹ ತಪ್ಪಿತಸ್ಥರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಇ) ಕರ್ನಾಟಕ ಆಹಾರ ಸರಬರಾಜು ನಿಗಮದಿಂದ ಪೂರೈಕೆಯಾಗುತ್ತಿರುವ ಅಕ್ಕಿಯ ಗುಣಮಟ್ಟವನ್ನು ಪರಿಶೀಲಿಸಿ ನ್ಯಾಯಬೆಲೆ ಅಂಗಡಿಗಳಿಗೆ ಸರಬರಾಜು ಮಾಡಲಾಗುತ್ತಿದೆಯೇ ; (ಮಾಹಿತಿ ನೀಡುವುದು)

(ಈ) ರಾಜ್ಯದಲ್ಲಿ ಅಕ್ಕಿಯನ್ನು ಹಾಗೂ ಇತರೆ ಆಹಾರ ಪದಾರ್ಥಗಳನ್ನು ಶೇಖರಿಸಲು ಇರುವ ಗೋದಾಮುಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

## ‘ಝಿಕಾ’ ವೈರಸ್ ಸೊಂಕಿನ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೮೪೯(೧೦೬೭) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಭಯಾನಕ ಸಾಂಕ್ರಾಮಿಕ ರೋಗ ‘ಝಿಕಾ’ ವೈರಸ್ ಸೊಂಕು ವಿಶ್ವದಾದ್ಯಂತ ಹರಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ರಾಜ್ಯದಲ್ಲಿ ಈ ಸೊಂಕು ಹರಡಿರುವ ಪ್ರಕರಣಗಳು ಬೆಳಕಿಗೆ ಬಂದಿವೆಯೇ ; ಮಾಹಿತಿ ನೀಡುವುದು ;

(ಇ) ಸದರಿ ‘ಝಿಕಾ’ ವೈರಸ್ ಶಿಶುಗಳ ಮೆದುಳಿನ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತಿರುವ ಈ ಸೊಂಕನ್ನು ತಡೆಗಟ್ಟಲು ರಾಜ್ಯ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಈ) ರಾಜ್ಯದಲ್ಲಿ ಈ ರೋಗವನ್ನು ನಿರ್ಮೂಲನೆ ಮಾಡಲು ಸರ್ಕಾರ ಮುಂಜಾಗ್ರಾತೆಯಾಗಿ ಸಂಶೋಧನಾ ಕೇಂದ್ರ ಮತ್ತು ಪ್ರಯೋಗಾಲಯವನ್ನು ಸ್ಥಾಪನೆ ಮಾಡಲಾಗಿದೆಯೇ ; ಇಲ್ಲದಿದ್ದಲ್ಲಿ ಇದನ್ನು ತಡೆಯಲು ಯಾವ ರೀತಿ ಸನ್ನದ್ಧವಾಗಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ಸರ್ವತೋಮುಖ ಅಭಿವೃದ್ಧಿ ಯೋಜನೆಗಳು

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೮೫೦(೧೦೬೮) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದರಾಬಾದ್–ಕರ್ನಾಟಕ ಭಾಗದ ೬ ಜಿಲ್ಲೆಗಳು ಹಾಗೂ ಹರಪ್ಪನಹಳ್ಳಿಯಲ್ಲಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ ಹಾಗೂ ಹಿಂದುಳಿದ ವರ್ಗಗಳ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಯೋಜನೆಗಳಾವುವು ; (ಯೋಜನೆವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಯೋಜನೆಗಳಿಗಾಗಿ ಕಳೆದ ೨ ವರ್ಷಗಳಿಂದ ಸರ್ಕಾರ ನೀಡಿದ ಅನುದಾನವೆಷ್ಟು ಹಾಗೂ ಖರ್ಚಾದ ಅನುದಾನವೆಷ್ಟು ? (ಜಿಲ್ಲಾವಾರು, ಯೋಜನೆವಾರು ಮಾಹಿತಿ ನೀಡುವುದು)

## ಹೈದರಾಬಾದ್–ಕರ್ನಾಟಕ ಭಾಗದಲ್ಲಿ 'ಅನ್ನಭಾಗ್ಯ' ಯೋಜನೆ ಮತ್ತು ಭ್ರಷ್ಟಾಚಾರ ಹಾಗೂ ಸೋರಿಕೆಯ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೮೫೧(೧೦೬೬) ಮಾನ್ಯ ಆಹಾರ, ಮತ್ತು ನಾಗರಿಕ ಸರಬರಾಜು ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ 'ಅನ್ನಭಾಗ್ಯ' ಯೋಜನೆಯು ಜಾರಿಯಲ್ಲಿರುವುದು ಸರ್ಕಾರದ ಗಮನಕ್ಕಿದೆಯೇ ; (ಯೋಜನೆಯ ಸಂಪೂರ್ಣ ವಿವರ ನೀಡುವುದು)

(ಆ) ಸದರಿ ಯೋಜನೆಯ ವ್ಯಾಪ್ತಿಯಲ್ಲಿ ಬರುವ ಕುಟುಂಬಗಳೆಷ್ಟು ; (ಹೈದರಾಬಾದ್-ಕರ್ನಾಟಕ ಭಾಗದ ೬ ಜಿಲ್ಲೆಗಳ ಜಿಲ್ಲಾವಾರು, ಪಡಿತರ ಚೀಟಿವಾರು ಮಾಹಿತಿ ನೀಡುವುದು)

(ಇ) ಈ ಯೋಜನೆಯಡಿಯಲ್ಲಿ ಸರ್ಕಾರ ೨ ವರ್ಷಗಳಲ್ಲಿ ನಿಗಧಿಪಡಿಸಿರುವ ಅನುದಾನವೆಷ್ಟು ; ಹಾಗೂ ಖರ್ಚಾಗಿರುವ ಅನುದಾನವೆಷ್ಟು ; (ಹೈದರಾಬಾದ್-ಕರ್ನಾಟಕದ ೬ ಜಿಲ್ಲೆಗಳ ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ರಾಜ್ಯದ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ಮತ್ತು ಸೋರಿಕೆ ಪ್ರಕರಣಗಳು ಬೆಳಕಿಗೆ ಬಂದಿವೆಯೇ ; ಬಂದಿದ್ದರೆ, ಈ ಪ್ರಕರಣಗಳಿಂದ ರಾಜ್ಯಕ್ಕೆ ಆಗಿರುವ ನಷ್ಟದ ಮೊತ್ತವೆಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

## ಮಂಡ್ಯ ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರ.

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೫೨(೧೦೪೩) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಂಡ್ಯ ಜಿಲ್ಲೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ ; (ವಿವರ ನೀಡುವುದು)

(ಇ) ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ರೋಗಿಗಳಿಗೆ ಅಗತ್ಯ ಔಷಧಿಗಳು ಲಭ್ಯವಿದೆಯೇ ; ಇಲ್ಲದಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಈ) ವಿವಿಧ ರೋಗಿಗಳ ಹಿತದೃಷ್ಟಿಯಿಂದ ಈ ಪ್ರಾಥಮಿಕ ಕೇಂದ್ರಗಳಲ್ಲಿ ಸರ್ಕಾರ ಯಾವ ಸುಧಾರಣೆ ಕ್ರಮ ಕೈಗೊಂಡಿದೆ ? (ವಿವರ ನೀಡುವುದು)

## ಭಾಗ್ಯಲಕ್ಷ್ಮಿ ಬಾಂಡ್‌ಗಳ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೫೩(೧೦೪೧) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆಯಲ್ಲಿ ಕಳೆದ ೫ ವರ್ಷದಲ್ಲಿ ಭಾಗ್ಯಲಕ್ಷ್ಮಿ ಬಾಂಡ್‌ಗಳನ್ನು ಎಷ್ಟು ಫಲಾನುಭವಿಗಳಿಗೆ ವಿತರಿಸಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಮಂಡ್ಯ ಜಿಲ್ಲೆಯಲ್ಲಿ ಭಾಗ್ಯಲಕ್ಷ್ಮಿ ಬಾಂಡ್‌ಗೆ ಬಂದಿರುವ ಅರ್ಜಿಗಳು ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಕೇಂದ್ರ ಫಲಾನುಭವಿಗಳು ಪಡಿತರ ಚೀಟಿ ಸಂಖ್ಯೆ ದೊರೆಯದೆ ಭಾಗ್ಯಲಕ್ಷ್ಮಿ ಬಾಂಡ್ ಅರ್ಜಿಯನ್ನು ಸ್ವೀಕರಿಸುತ್ತಿಲ್ಲವಾದ್ದರಿಂದ ಬಡ ಹೆಣ್ಣು ಮಕ್ಕಳ ಭಾಗ್ಯಲಕ್ಷ್ಮಿಯ ಫಲಾನುಭವಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸಮಸ್ಯೆ ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು ?

## ಮಂಡ್ಯ ಜಿಲ್ಲೆಯ ನ್ಯಾಯ ಬೆಲೆ ಅಂಗಡಿ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೫೪(೧೦೪೨) ಮಾನ್ಯ ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆಯಲ್ಲಿರುವ ಸರ್ಕಾರಿ ನ್ಯಾಯಬೆಲೆ ಅಂಗಡಿಗಳೆಷ್ಟು ; ಸದರಿ ಅಂಗಡಿಗಳಿಗೆ ನೀಡುವ ಪಡಿತರ ವಿತರಣೆ ಪ್ರಮಾಣವೆಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಜಿಲ್ಲೆಯಲ್ಲಿ ಒಟ್ಟು ಎಷ್ಟು ಬಿಪಿಎಲ್, ಎಪಿಎಲ್ ಮತ್ತು ಅಂತ್ಯೋದಯ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ ; ಇನ್ನೂ ಎಷ್ಟು ಪಡಿತರ ಚೀಟಿಗಳನ್ನು ವಿತರಿಸಬೇಕಾಗಿದೆ ;

(ಇ) ಜಿಲ್ಲೆಯಲ್ಲಿ ವಿತರಣೆಯಾಗುವ ಪಡಿತರ ಸಾಮಗ್ರಿಗಳು ಕಳಪೆ ಗುಣಮಟ್ಟದ್ದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; (ತಾಲ್ಲೂಕುವಾರು ವಿವರ ಒದಗಿಸುವುದು)

(ಈ) ಜಿಲ್ಲೆಯಲ್ಲಿ ನಕಲಿ ಪಡಿತರ ಚೀಟಿಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು ? (ವಿವರ ನೀಡುವುದು)

## ಹಾಸನ ಕೆ.ಎಸ್.ಆರ್.ಟಿ.ಸಿ ವಿಭಾಗದಲ್ಲಿನ ಅವ್ಯವಹಾರ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೫೫(೧೦೪೫) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಾಸನ ಕೆ.ಎಸ್.ಆರ್.ಟಿ.ಸಿ ವಿಭಾಗ ಕಳೆದ ಎಷ್ಟು ವರ್ಷಗಳಿಂದ ನಷ್ಟ ಅನುಭವಿಸುತ್ತಿದೆ ಇದಕ್ಕೆ ಇರುವ ಕಾರಣಗಳೇನು ; ನಷ್ಟ ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು ; (ವಿವರ ನೀಡುವುದು)

(ಆ) ಈ ವಿಭಾಗದಲ್ಲಿ ವ್ಯಾಪಕ ಭ್ರಷ್ಟಾಚಾರ ತಾಂಡವವಾಡುತ್ತಿದ್ದು, ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮವೇನು ; ಇದರಲ್ಲಿ ತಪ್ಪಿತಸ್ಥರ ವಿರುದ್ಧ ಯಾವ ಕ್ರಮಕೈಗೊಳ್ಳಲಾಗಿದೆ ; (ವಿವರ ನೀಡುವುದು)

(ಇ) ಸದರಿ ವಿಭಾಗದಲ್ಲಿ ನೌಕರರಿಗೆ ಅನಗತ್ಯ ತೊಂದರೆಕೊಡುತ್ತಿರುವುದನ್ನು ಮಟ್ಟಹಾಕಲು ಸರ್ಕಾರ ಕೈಗೊಂಡಿರುವ ಕ್ರಮವೇನು ;

(ಈ) ಸದರಿ ವಿಭಾಗದಲ್ಲಿ ನೌಕರರ ಮನವಿಗೆ ಕಿಂಚಿತ್ತು ಕಳಕಳಿ ತೋರದೆ ಇರುವುದನ್ನು ಸರಿಪಡಿಸಲು ಯಾವ ಕ್ರಮಕೈಗೊಳ್ಳಲಾಗುವುದು ?

## ರಾಜ್ಯದ ಜಿಲ್ಲಾ ಆಸ್ಪತ್ರೆಗಳಲ್ಲಿ ಜನರಿಕ್ ಔಷಧ ಮಳಿಗೆಗಳನ್ನು ತೆರೆಯುವ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೫೬(೧೦೪೪) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಎಷ್ಟು ಜಿಲ್ಲಾ ಆಸ್ಪತ್ರೆಗಳಲ್ಲಿ ಜನರಿಕ್ ಔಷಧ ಮಳಿಗೆಗಳನ್ನು ತೆರೆಯಲಾಗಿದೆ ;

(ಆ) ತೆರೆಯಲಾಗಿದ್ದರೆ ಯಾವ ಯಾವ ಜಿಲ್ಲೆಗಳಲ್ಲಿ ತೆರೆಯಲಾಗಿದೆ ; (ಮಾಹಿತಿ ನೀಡುವುದು)

(ಇ) ಇನ್ನುಳಿದ ಜಿಲ್ಲೆಗಳಲ್ಲಿ ಜನರಿಕ್ ಔಷಧ ಮಳಿಗೆಯನ್ನು ತೆರೆಯಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ರಾಯಚೂರು ಜಿಲ್ಲೆಯಲ್ಲಿರುವ ಅಂಗನವಾಡಿ ಕೇಂದ್ರಗಳ ಬಗ್ಗೆ

**ಶ್ರೀ ಎನ್‌.ಎಸ್‌.ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೮೫೭(೧೦೫೫) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರು ಜಿಲ್ಲೆಯಲ್ಲಿರುವ ಒಟ್ಟು ಅಂಗನವಾಡಿ ಕೇಂದ್ರಗಳೆಷ್ಟು ;

(ಆ) ಜಿಲ್ಲೆಯಲ್ಲಿನ ಸ್ವಂತ ಕಟ್ಟಡಗಳಿರುವ ಅಂಗನವಾಡಿ ಕೇಂದ್ರಗಳೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಕೆಲವು ಅಂಗನವಾಡಿ ಕೇಂದ್ರಗಳಲ್ಲಿ ಅವ್ಯವಹಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು ?

## ಹೈದರಾಬಾದ್–ಕರ್ನಾಟಕ ಪ್ರದೇಶಗಳಿಗೆ ಅಭಿವೃದ್ಧಿ ಕುರಿತು

**ಶ್ರೀ ಎನ್‌.ಎಸ್‌.ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೮೫೮(೧೦೫೧) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ಸೇರಿರುವ ಆರು ಜಿಲ್ಲೆಗಳನ್ನು ತ್ವರಿತ ಗತಿಯಲ್ಲೂ ಅಭಿವೃದ್ಧಿ ಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಹೈದರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಯೋಜನೆಗಳಾವುವು ?

## ಹೈದರಾಬಾದ್–ಕರ್ನಾಟಕ ಪ್ರದೇಶಗಳಿಗೆ ಸಾರಿಗೆ ಸೌಕರ್ಯ ಕುರಿತು

**ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೮೫೯(೧೦೫೨) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದರಾಬಾದ್–ಕರ್ನಾಟಕ ಪ್ರದೇಶಗಳ ಆರು ಜಿಲ್ಲೆಗಳಲ್ಲಿ ಅಂದಾಜು ೧೫೦ ಗ್ರಾಮಗಳಿಗೆ ಸಾರಿಗೆ ಸೌಕರ್ಯ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ೧೫೦ ಗ್ರಾಮಗಳಿಗೆ ಸಾರಿಗೆ ಸೌಕರ್ಯ ಕಲ್ಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ಮಾನ್ವಿ ತಾಲ್ಲೂಕಿನ ನೆರವಾರ ಪಟ್ಟಣದ ಬಸ್ ನಿಲ್ದಾಣ ಹಾಳಾಗಿರುವುದರಿಂದ ಪ್ರಯಾಣಿಕರಿಗೆ ಆಗುತ್ತಿರುವಂತಹ ಅನಾನುಕೂಲತೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಬಸ್ ನಿಲ್ದಾಣ ಸುಸಜ್ಜಿತಗೊಳಿಸಲು ಹಾಗೂ ಪ್ರಯಾಣಿಕರಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಹೈದರಾಬಾದ್–ಕರ್ನಾಟಕ ಪ್ರದೇಶಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳು

**ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೮೬೦(೧೦೫೩) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದರಾಬಾದ್–ಕರ್ನಾಟಕ ಪ್ರದೇಶಗಳ ಆರು ಜಿಲ್ಲೆಗಳಲ್ಲಿ ಖಾಲಿ ಇರುವ ಒಟ್ಟು ವೈದ್ಯರ ಹುದ್ದೆಗಳೆಷ್ಟು ; ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ರಾಯಚೂರು ನಗರದಲ್ಲಿ ೨೦೦ ಹಾಸಿಗೆಗಳುಳ್ಳ (Mother and Child Hospital) ತಾಯಿ ಮತ್ತು ಶಿಶು ಹಾರೈಕೆ ಆಸ್ಪತ್ರೆಯನ್ನು ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ರಾಯಚೂರು ನಗರದಲ್ಲಿ ನೂತನ ಕ್ಯಾನ್ಸರ್ ಆಸ್ಪತ್ರೆಯನ್ನು ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ರಾಯಚೂರು ಜಿಲ್ಲೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮಂಜೂರಾತಿಗಿರುವ ಯೋಜನೆಗಳ ಕುರಿತು

**ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೮೬೧(೧೦೫೪) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದರಾಬಾದ್–ಕರ್ನಾಟಕ ವಿಶೇಷ ಸ್ಥಾನಮಾನದಡಿಯಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಸೇರಿರುವ ಒಟ್ಟು ವಸತಿ ಶಾಲೆಗಳೆಷ್ಟು ; ಇದರಲ್ಲಿ ಸ್ವಂತ ಕಟ್ಟಡ ಹೊಂದಿರುವ ವಸತಿ ಶಾಲೆಗಳೆಷ್ಟು ;

(ಆ) ರಾಯಚೂರು ಜಿಲ್ಲೆಗೆ ೨೦೧೫–೧೬ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ವಿವಿಧ ಯೋಜನೆಗಳ ಮುಖಾಂತರ ಮಂಜೂರಾಗಿರುವ ಹಣ ಎಷ್ಟು ; ಇದರಿಂದ ಅನುಕೂಲವಾಗಿರುವ ಫಲಾನುಭವಿಗಳ ಸಂಖ್ಯೆ ಎಷ್ಟು ?

## ಪರಿಶಿಷ್ಠ ಜಾತಿ ಮತ್ತು ವರ್ಗಗಳ ಹುದ್ದೆಗಳು

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೬೨(೧೦೫೮) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳವರಿಗೆ ಮೀಸಲಾಗಿರುವ ಹುದ್ದೆಗಳು ಎಲ್ಲಾ ಇಲಾಖೆಗಳಲ್ಲಿ ಭರ್ತಿಯಾಗಿವೆಯೇ ಎಂಬ ಬಗ್ಗೆ ಇಲಾಖೆ ಸಮೀಕ್ಷೆ ನಡೆಸಿದೆಯೇ ;

(ಆ) ಖಾಲಿ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಿ ಸಾಮಾಜಿಕ ನ್ಯಾಯ ದೊರಕಿಸಿಕೊಡುವಂತೆ ಒತ್ತಾಯ ಮಾಡಿ ಇಲಾಖೆಗೆ ಪತ್ರ ಬರೆಯಲಾಗಿದೆಯೇ ; ಅಥವಾ ಯಾವ ರೀತಿ ಕ್ರಮಕೈಗೊಳ್ಳಲಾಗಿದೆ ;

(ಇ) ಬ್ಯಾಕ್‌ಲಾಗ್ ಹುದ್ದೆಗಳನ್ನು ಎಲ್ಲಾ ಇಲಾಖೆಗಳಲ್ಲಿ ತುಂಬಲು ಇಲಾಖೆ ಯಾವ ಕ್ರಮತೆಗೆದುಕೊಂಡಿದೆ ?

## ಸರ್ಕಾರಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೌಲಭ್ಯ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೬೩(೧೦೫೭) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೌಲಭ್ಯವನ್ನು ಕಲ್ಪಿಸಲಾಗಿದೆಯೇ ;

(ಆ) ಎಲ್ಲಾ ಆಸ್ಪತ್ರೆಗಳಲ್ಲಿ ಈ ಸೌಲಭ್ಯವಿಲ್ಲದಿದ್ದರೆ ಎಷ್ಟು ದಿವಸಗಳಲ್ಲಿ ಈ ಸೌಲಭ್ಯ ಕಲ್ಪಿಸಲಾಗುವುದು ; ಈ ಬಗ್ಗೆ ಸರ್ಕಾರ ಗಂಭೀರವಾಗಿ ಆಲೋಚಿಸುತ್ತದೆಯೇ ;

(ಇ) ಬಡ ಹಾಗೂ ಮಧ್ಯಮ ವರ್ಗದ ರೋಗಿಗಳಿಗೆ ಕಡಿಮೆ ದರದಲ್ಲಿ ಡಯಾಲಿಸಿಸ್ ಸೌಲಭ್ಯ ದೊರಕುವಂತೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು ?

## ಜಾನಪದ ಕಲೆಗೆ ಪ್ರೋತ್ಸಾಹ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

ಲ೬ಳ(೧೦೫೬) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ಜಾನಪದ ಅಕಾಡೆಮಿಯಿಂದ ಜಾನಪದ ಕಲೆಯ ಅಭಿವೃದ್ಧಿಗಾಗಿ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ;

(ಆ) ಜನಪದ ಗೀತೆಗಳ ಸೊಬಗು ಮತ್ತು ಸೊಗಡನ್ನು ಯುವಜನರಿಗೆ ತಿಳಿಸಿ ಅವರಿಗೆ ಈ ಬಗ್ಗೆ ಆಸಕ್ತಿ ಮೂಡಿಸಲು ಯಾವುದಾದರೂ ಕಾರ್ಯಕ್ರಮವನ್ನು ಅಕಾಡೆಮಿ ರೂಪಿಸಿದೆಯೇ ;

(ಇ) ಇತ್ತೀಚೆಗೆ ಮಕ್ಕಳು ಮತ್ತು ಯುವಕರಲ್ಲಿ ಜಾನಪದ ಕಲೆಗಳ ಬಗ್ಗೆ ನಿರಾಸಕ್ತಿ ಮೂಡಿರುವುದರಿಂದ ಅವರನ್ನು ಆಕರ್ಷಿಸಲು ಶಾಲಾ ಕಾಲೇಜುಗಳಲ್ಲಿ ಪ್ರಸಿದ್ಧ ಗಾಯಕರಿಂದ ಜನಪದ ಗೀತೆಗಳನ್ನು ಹಾಡಿಸುವ ಕಾರ್ಯಕ್ರಮ ನಡೆಸಲು ಅಕಾಡೆಮಿ ಪ್ರಯತ್ನಿಸುವುದೇ ;

(ಈ) ಇದಕ್ಕಾಗಿ ಹೆಚ್ಚಿನ ಅನುದಾನವನ್ನು ಇಲಾಖೆಯಿಂದ ಅಕಾಡೆಮಿಗೆ ನೀಡಲು ಕ್ರಮಕೈಗೊಳ್ಳುತ್ತೀರಾ ?

## “ವೆಂಟಿಲೇಟರ” ಕೊರತೆ ಕುರಿತು

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೬೫(೯೮೮) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಾರವಾರ ಜಿಲ್ಲೆಯಲ್ಲಿ ತುರ್ತು ಸಂದರ್ಭದಲ್ಲಿ ಅಗತ್ಯವಾದ “ವೆಂಟಿಲೇಟರ್” ಜಿಲ್ಲೆಯ ಬೆರಳೆಣಿಕೆಯಷ್ಟು ಆಸ್ಪತ್ರೆಗಳಲ್ಲಿ ಮಾತ್ರ ಲಭ್ಯವಿದೆ ; ಈ ಯಂತ್ರದ ನಿರ್ವಹಣೆಯನ್ನು ಮಾಡುವ ತಂತ್ರಜ್ಞರ ಕೊರತೆ ಜಿಲ್ಲೆಯಲ್ಲಿದ್ದು, ತುರ್ತು ಚಿಕಿತ್ಸೆಗಾಗಿ ಹೊರ ಜಿಲ್ಲೆಗಳ ಆಸ್ಪತ್ರೆಗಳನ್ನೆ ಆಶ್ರಯಿಸಬೇಕಾದ ಅನಿವಾರ್ಯ ಪರಿಸ್ಥಿತಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ; (ವಿವರ ನೀಡುವುದು)

(ಆ) ಈಗಾಗಲೇ ಜಿಲ್ಲಾ ಆಸ್ಪತ್ರೆ ಕಾರವಾರದಲ್ಲಿ ಅವಶ್ಯವಾದ “ವೆಂಟಿಲೇಟರ್” ಇದ್ದರೂ ಅದನ್ನು ಸಾರ್ವಜನಿಕರಿಗೆ ಏಕೆ ಉಪಯೋಗಕ್ಕೆ ನೀಡದಿರಲು ಕಾರಣವೇನು ; ಇದಕ್ಕೆ ಯಾರು ಹೊಣೆಗಾರರು ; (ವಿವರ ನೀಡುವುದು)

(ಇ) ಸಾರ್ವಜನಿಕ ಹಿತದೃಷ್ಟಿಯಿಂದ ಕೂಡಲೇ ಜಿಲ್ಲೆಯ ಎಲ್ಲಾ ತಾಲ್ಲೂಕಿನಲ್ಲಿ ಸಾರ್ವಜನಿಕರಿಗೆ ಅಗತ್ಯವಾಗಿರುವ “ವೆಂಟಿಲೇಟರ್” ಸಂಬಂಧಿಸಿದ ತಂತ್ರಜ್ಞರ/ಸಿಬ್ಬಂದಿ ಸಮೇತ ಸರ್ಕಾರ ವ್ಯವಸ್ಥೆ ಮಾಡಿಕೊಡುವುದೇ ;

(ಈ) ಹಾಗಿದ್ದಲ್ಲಿ, ಎಷ್ಟು ದಿನದಲ್ಲಿ ಈ ವ್ಯವಸ್ಥೆ ಮಾಡಿಕೊಡಲಾಗುವುದು ? (ವಿವರ ನೀಡುವುದು)

## ಶಿರ್ಶಿ ಬಸ್ ನಿಲ್ದಾಣದಲ್ಲಿ ಶೌಚಾಲಯ ಹಾಗೂ ಅದರ ಪಕ್ಕದ ಪರಿಸರ ಸ್ವಚ್ಛತೆಯಿಲ್ಲದಿರುವುದರಿಂದ ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೬೬(೯೮೬) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಕೇಂದ್ರ ಸ್ಥಾನವಾದ ಕಾರವಾರ ಜಿಲ್ಲೆಯ, ಶಿರಸಿಯ ಹಳೆ ಬಸ್ ನಿಲ್ದಾಣದ ಶೌಚಾಲಯ ಹಾಗೂ ಅದರ ಪಕ್ಕದ ಪರಿಸರ ಗಬ್ಬು ನಾರುತ್ತಿರುವುದರಿಂದ ಸಾರ್ವಜನಿಕರಿಗೆ ಬಸ್ ನಿಲ್ದಾಣಕ್ಕೆ ಬರಲು ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ; (ವಿವರ ನೀಡುವುದು)

(ಆ) ಸದರಿ ಬಸ್ ನಿಲ್ದಾಣದ ಶೌಚಾಲಯದ ಪಕ್ಕದಲ್ಲಿ ಬಿದ್ದಿರುವ ಕಸದ ರಾಶಿ ಕೊಳತು ನಾರುತ್ತಿರುವುದರಿಂದ ಸಾರ್ವಜನಿಕರು ಪೋಟೋ ತೆಗೆದು ಅಂತರ್ಜಾಲದಲ್ಲಿ ಬಿಡುತ್ತಿರುವುದರಿಂದ ಸದರಿ ಸಂಸ್ಥೆಗೆ ಕೆಟ್ಟ ಹೆಸರು ಬರುವುದರಿಂದ ಇದನ್ನು ಕೂಡಲೇ ಸರ್ಕಾರ ಬಗೆಹರಿಸುವುದೇ ;

(ಇ) ಪ್ರತಿದಿನ ಪ್ರಯಾಣಿಕರಿಂದ ಲಕ್ಷಾಂತರ ರೂಪಾಯಿ ಆದಾಯಗಳಿಸುವ ಸಂಸ್ಥೆ ಕನಿಷ್ಠ ಸ್ವಚ್ಛತೆಯನ್ನು ಕಾಪಾಡದಿರುವುದಕ್ಕೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದು ; ಈ ಬಗ್ಗೆ ಸಂಸ್ಥೆಯವರಿಗೆ ಕೂಡಲೇ ಸದರಿ ಸಮಸ್ಯೆ ಬಗೆಹರಿಸಲು ತಿಳಿಸಲಾಗುವುದೇ ? (ವಿವರ ನೀಡುವುದು)

## ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರ ದುರ್ನಡತೆ ಕುರಿತು.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೬೭(೯೮೭) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಾರವಾರ ಜಿಲ್ಲೆ ಯಲ್ಲಾಪೂರ ತಾಲ್ಲೂಕಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರು ಮದ್ಯಪಾನ ಮಾಡಿ ಶಾಲಾ ವಿದ್ಯಾರ್ಥಿಗಳ ಜೊತೆ ಅಸಭ್ಯವಾಗಿ ವರ್ತಿಸಿದ್ದರಿಂದ ವಿದ್ಯಾರ್ಥಿಗಳು ಶಾಲಾ ಆವರಣದಲ್ಲಿ ದೊಡ್ಡ ರೀತಿಯಲ್ಲಿ ಪ್ರತಿಭಟನೆ ಮಾಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ; (ವಿವರ ನೀಡುವುದು)

(ಆ) ಈ ರೀತಿ ಮದ್ಯಪಾನ ಮಾಡಿ ಅಸಭ್ಯ ರೀತಿಯಲ್ಲಿ ವರ್ತಿಸುತ್ತಿದ್ದ ಪ್ರಾಂಶುಪಾಲರನ್ನು ವೈದ್ಯಕೀಯ ತಪಾಸಣೆಗೆ ಕಳುಹಿಸಿದ್ದು, ವೈದ್ಯರ ವರದಿ ಪಡೆದು ಇಲ್ಲಿಯವರೆಗೆ ಯಾವ ಕಾರಣಕ್ಕಾಗಿ ಅವರನ್ನು ಅಮಾನತ್ತು ಮಾಡಿರುವುದಿಲ್ಲ ? (ವಿವರ ನೀಡುವುದು)

## ಬಸ್ ನಿಲ್ದಾಣ ಮಂಜೂರಾತಿ ಮಾಡಿಕೊಡುವ ಬಗ್ಗೆ

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೬೮ (೯೮೯) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆ, ಖಾನಾಪೂರ ತಾಲ್ಲೂಕಿನ ನಂದಗಡ ಗ್ರಾಮದಲ್ಲಿ ಇದುವರೆಗೂ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣವಿಲ್ಲದೆ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ;

(ಆ) ಹಾಗಿದ್ದಲ್ಲಿ, ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ನಿರ್ಮಿಸಲು ಸರ್ಕಾರ ಸ್ಥಳವನ್ನು ಗುರುತಿಸಿದೆಯೇ ;

(ಇ) ಗುರುತಿಸಿದ್ದರೆ/ಗುರುತಿಸಿಲ್ಲದಿದ್ದರೆ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣವನ್ನು ಅನುಷ್ಠಾನಗೊಳಿಸಲು ಸರ್ಕಾರಕ್ಕಿರುವ ತೊಂದರೆಗಳೇನು ? (ವಿವರ ನೀಡುವುದು)

## ಸಮಾಜ ಕಲ್ಯಾಣ ಇಲಾಖೆಯಲ್ಲಿ ಬಂದಿರುವ ಅನುದಾನ ಸರಿಯಾಗಿ ಬಳಕೆ ಮಾಡದೆ ಇರುವ ಬಗ್ಗೆ

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೬೯ (೯೯೦) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಾರವಾರ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಕಳೆದ ೫ ವರ್ಷಗಳಿಂದ ಯಾವ ಯಾವ ಶೀರ್ಷಿಕೆಯಲ್ಲಿ ಯಾವ ಯಾವ ತಾಲ್ಲೂಕಿಗೆ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಬಂದಿರುತ್ತದೆ; (ತಾಲ್ಲೂಕುವಾರು, ಜಿಲ್ಲಾವಾರು ಸ್ಪಷ್ಟವಾಗಿ ಮಾಹಿತಿ ನೀಡುವುದು)

(ಆ) ಬಂದಿರುವ ಅನುದಾನದಲ್ಲಿ ಮಾಡಿರುವ ಕಾಮಗಾರಿಗಳ ವಿವರ ನೀಡುವುದು ? (ಟೆಂಡರ್ ಮುಖಾಂತರ/ಏಜೆನ್ಸಿ ಮುಖಾಂತರ ನೇರವಾಗಿ ನೀಡಿರುವ ಸಂಪೂರ್ಣ ವಿವರ ತಾಲ್ಲೂಕುವಾರು/ ಜಿಲ್ಲಾವಾರು ವಿವರ ನೀಡುವುದು)

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸುವ ಬಗ್ಗೆ

**ಶ್ರೀ ಐವಾನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) :–**

೮೭೦ (೯೭೬) ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ವಿಳಂಬ ನೀತಿಯನ್ನು ಅನುಸರಿಸಲು ಕಾರಣವೇನು; (ವಿವರ ನೀಡುವುದು)

(ಆ) ರಾಜ್ಯದಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಸ್ವಂತ ಆಸ್ಪತ್ರೆ ಇದೆಯೇ ; ಎಷ್ಟು ಹಾಸಿಗೆ (ಬೆಡ್)ಗಳ ಆಸ್ಪತ್ರೆ ಯಾವ ಯಾವ ಮೆಡಿಕಲ್ ಕಾಲೇಜುಗಳಿಗೆ ಇದೆ ; (ವಿವರ ನೀಡುವುದು)

(ಇ) ರಾಜ್ಯದಲ್ಲಿ ಎಷ್ಟು ಸರ್ಕಾರಿ ಮೆಡಿಕೆಲ್ ಸೀಟುಗಳಿವೆ ; ಕಳೆದ ವರ್ಷ ಎಷ್ಟು ಸೀಟುಗಳನ್ನು ನೀಡಲಾಗಿದೆ ; ಮುಂದಿನ ವರ್ಷದ ಯೋಜನೆ ಏನು ; (ವಿವರ ನೀಡುವುದು)

(ಈ) ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗಳು ನಿಯಮದಂತೆ ಬಡವರಿಗೆ ಉಚಿತ ಚಿಕಿತ್ಸೆ ನೀಡಲು ನಿರಾಕರಿಸುತ್ತಿರುವ ಬಗ್ಗೆ ಇಲಾಖೆಯ ಗಮನಕ್ಕೆ ಬಂದಿದೆಯೇ ; ಬಾರದೇ ಇದ್ದಲ್ಲಿ, ವರದಿಯನ್ನು ತರಿಸಲಾಗುವುದೇ ? (ವಿವರ ನೀಡುವುದು)

## ಕೊಂಕಣಿ ಸಾಹಿತ್ಯ ಅಕಾಡೆಮಿಗೆ ನೂತನ ಕೊಂಕಣಿ ಭವನ ನಿರ್ಮಾಣ ಮಾಡುವ ಬಗ್ಗೆ

**ಶ್ರೀ ಐವಾನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) :–**

೮೭೧ (೯೭೮) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಂಕಣಿ ಸಾಹಿತ್ಯ ಅಕಾಡೆಮಿಗೆ ನೂತನ ಕೊಂಕಣಿ ಭವನ ನಿರ್ಮಾಣ ಮಾಡಬೇಕೆಂಬ ಪ್ರಸ್ತಾವನೆಯ ಸಂಬಂಧ ಇಲಾಖೆ ಕೈಗೊಂಡಿರುವ ಕ್ರಮವೇನು ;

(ಆ) ಶಾಲಾ–ಕಾಲೇಜುಗಳಲ್ಲಿ ಕೊಂಕಣಿ ಭೋದನೆಗೆ ಇಲಾಖೆ ನೀಡುತ್ತಿರುವ ಪ್ರೋತ್ಸಾಹವೇನು ;

(ಇ) ರಾಜ್ಯದಲ್ಲಿ ಎಷ್ಟು ಕೊಂಕಣಿ ಶಿಕ್ಷಕರನ್ನು ನೇಮಕ ಮಾಡಲಾಗಿದೆ; ಪ್ರಸ್ತುತ ಎಷ್ಟು ವಿದ್ಯಾರ್ಥಿಗಳು ಪ್ರಾಥಮಿಕ ಶಿಕ್ಷಣದವರಿಗೆ ಕೊಂಕಣಿ ಭಾಷೆಯನ್ನು ಕಲಿಯುತ್ತಿದ್ದಾರೆ ;

(ಈ) ಕೊಂಕಣಿ ಸಾಹಿತ್ಯ ಅಕಾಡೆಮಿಗೆ ಖಾಯಂ ರಿಜಿಸ್ಟ್ರಾರ್‌ನ್ನು ನೇಮಕ ಮಾಡದೆ, ಅಕಾಡೆಮಿಯ ಚಟುವಟಿಕೆಗಳು ಕುಂಠಿತವಾಗುತ್ತಿರುವುದಕ್ಕೆ ಇಲಾಖೆ ತೆಗೆದುಕೊಂಡಿರುವ ಕ್ರಮವೇನು;

(ಉ) ಕೊಂಕಣಿ ಸಾಹಿತ್ಯ ಅಕಾಡೆಮಿಗೆ ೨೦೧೪–೧೫ ಮತ್ತು ೨೦೧೫–೧೬ರಲ್ಲಿ ಕೈಗೊಂಡ ಕಾರ್ಯಕ್ರಮಗಳೇನು, ವಿನಿಯೋಗಿಸಿದ ವೆಚ್ಚ ಎಷ್ಟು ? (ಸಂಪೂರ್ಣ ವಿವರ ನೀಡುವುದು)

## ರಾಜ್ಯದಲ್ಲಿರುವ ಎಲ್ಲಾ ಬಸ್ಸು ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಬೇಕೆಂಬ ಪ್ರಸ್ತಾವನೆ

**ಶ್ರೀ ಐವಾನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) :–**

೮೭೨ (೯೭೮) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಲ್ಲಾ ಬಸ್ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಬೇಕೆಂಬ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಇದ್ದರೆ, ಈ ಬಗ್ಗೆ ವಿವರ ನೀಡುವುದು ;

(ಆ) ರಾಜ್ಯದಲ್ಲಿ ಖಾಸಗಿ ಬಸ್ಸುಗಳು ಸಾರ್ವಜನಿಕರಿಗೆ ಉತ್ತಮ ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿರುವ ಬಗ್ಗೆ ಸರ್ಕಾರ ಗಮನಿಸಿದೆಯೇ;

(ಇ) ರಾಜ್ಯ ಸಾರಿಗೆ ಇಲಾಖೆ ಪ್ರಸ್ತುತ ಜನರ ಬೇಡಿಕೆಯನ್ನು ಈಡೇರಿಸಲು ಸಾಧ್ಯವಾಗದ ಬಗ್ಗೆ ಇಲಾಖೆಯ ನಿಲುವು ಏನು ;

(ಈ) ರಾಜ್ಯದಲ್ಲಿ ಸಂಪೂರ್ಣ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಿದ್ದಲ್ಲಿ ಇಲಾಖೆಗೆ ಬೇಕಾಗುವ ಅನುದಾನ ಎಷ್ಟು ;

(ಉ) ಸಾರಿಗೆ ಇಲಾಖೆಯಲ್ಲಿ ಖಾಸಗಿ ಬಸ್ಸುಗಳನ್ನು ಗುತ್ತಿಗೆ ಆಧಾರದಲ್ಲಿ ಪಡೆದು, ಇಲಾಖೆ ಜನರ ಬೇಡಿಕೆಗಳನ್ನು ಪೂರೈಸುತ್ತಿರುವುದು ಸರಿಯೆ ; ಪ್ರಸ್ತುತ ಇಲಾಖೆಯ ಯಾವ ಯಾವ ವಿಭಾಗಗಳು ಲಾಭದಲ್ಲಿದೆ ; ನಷ್ಟದಲ್ಲಿರುವ ವಿಭಾಗಗಳು ಯಾವುವು ? (ಕಾರಣ ತಿಳಿಸುವುದು)

## ರಾಜ್ಯದಲ್ಲಿರುವ ಒಟ್ಟು ಬಿ.ಪಿ.ಎಲ್, ಎ.ಪಿ.ಎಲ್ ಮತ್ತು ಅಂತ್ಯೋದಯ ಕಾರ್ಡ್‌ದಾರರ ಸಂಖ್ಯೆ ಬಗ್ಗೆ

**ಶ್ರೀ ಐವಾನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) :–**

೮೭೩ (೯೭೭) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಿ.ಪಿ.ಎಲ್ ಕಾರ್ಡ್ ಪಡೆಯಲು ಯಾವ ಮಾನದಂಡವನ್ನು ಅನುಸರಿಸಲಾಗುವುದು ಮತ್ತು ನೀಡಬೇಕಾದ ದಾಖಲೆಗಳು ಯಾವುವು ;

(ಆ) ರಾಜ್ಯದಲ್ಲಿರುವ ಒಟ್ಟು ಕುಟುಂಬಗಳ ಸಂಖ್ಯೆ ಎಷ್ಟು ; ಅದರಲ್ಲಿ ಬಿ.ಪಿ.ಎಲ್ ಕಾರ್ಡ್ ಎಷ್ಟು ; ಎ.ಪಿ.ಎಲ್ ಕಾರ್ಡ್ ಎಷ್ಟು ; ಅಂತ್ಯೋದಯ ಕಾರ್ಡುದಾರರು ಎಷ್ಟು ;

(ಇ) ೨೦೧೫-೧೬ರಲ್ಲಿ ಎಷ್ಟು ಬಿ.ಪಿ.ಎಲ್ ಕಾರ್ಡ್‌ಗಳನ್ನು ರದ್ದು ಮಾಡಲಾಗಿದೆ ; ರದ್ದು ಮಾಡಲು ಇರುವ ನಿಯಮಗಳೇನು ; ನಿಯಮಗಳ ಬದಲಾವಣೆ ಮಾಡುವ ಬಗ್ಗೆ ಇಲಾಖೆ ಚಿಂತನೆ ನಡೆಸಿದೆಯೇ ; (ವಿವರ ನೀಡುವುದು)

(ಈ) ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಒಂದೇ ನಿಯಮವನ್ನು ಅಳವಡಿಸಿರುವುದರಿಂದ ಹಲವು ಕುಟುಂಬಗಳಿಗೆ ತೊಂದರೆ ಆಗುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ ?

## ತುಳು ಭಾಷೆ ೮ನೇ ಪರಿಚ್ಛೇದಕ್ಕೆ ಸೇರಿಸುವ ಬಗ್ಗೆ

**ಶ್ರೀ ಐವಾನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) :–**

೮೭೪ (೯೮೦) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಳು ಭಾಷೆ ೮ನೇ ಪರಿಚ್ಛೇದಕ್ಕೆ ಸೇರಿಸಬೇಕೆಂಬ ಬೇಡಿಕೆಗೆ ಸರ್ಕಾರ ಕೈಗೊಂಡಿರುವ ಕ್ರಮವೇನು ;

(ಆ) ತುಳು ಭಾಷೆಯನ್ನು ಮಾತನಾಡುವವರು ರಾಜ್ಯ ಮತ್ತು ದೇಶದಲ್ಲಿರುವ ಜನರ ಸಂಖ್ಯೆ ಎಷ್ಟು ; ತುಳು ಭಾಷೆಗೆ ಪ್ರೋತ್ಸಾಹಿಸಲು ಇಲಾಖೆ ಕೈಗೊಂಡಿರುವ ಯೋಜನೆಗಳಾವುವು;

(ಇ) ತುಳು ಭಾಷೆಯನ್ನು ಶಾಲೆಗಳಲ್ಲಿ ಬೋಧಿಸಲು ಇಲಾಖೆ ಕ್ರಮಕೈಗೊಂಡಿದೆಯೇ ;

(ಈ) ಬ್ಯಾರಿ ಸಾಹಿತ್ಯ ಅಕಾಡೆಮಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಇಲಾಖೆ ಮುಂದೆ ಪ್ರಸ್ತಾವನೆ ಇದೆಯೇ ;

(ಉ) ೨೦೧೪-೧೫ ರಿಂದ ಮತ್ತು ೨೦೧೫-೧೬ರಲ್ಲಿ ಬ್ಯಾರಿ ಸಾಹಿತ್ಯ ಅಕಾಡೆಮಿಯಿಂದ ಕೈಗೊಂಡಂತಹ ಕಾರ್ಯಕ್ರಮಗಳಾವುವು; ಇದಕ್ಕೆ ತಗಲುವ ವೆಚ್ಚ ಎಷ್ಟು ? (ವಿವರ ನೀಡುವುದು)

## ಗೊಲ್ಲರಹಟ್ಟಿ, ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿಸುವ ಬಗ್ಗೆ

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು):–**

೮೭೫ (೧೦೦೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯಾದ್ಯಂತ ಇರುವ ಗೊಲ್ಲರಹಟ್ಟಿ, ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ;

(ಆ) ಇದ್ದಲ್ಲಿ, ಯಾವಾಗ ಘೋಷಣೆ ಮಾಡಲಾಗುವುದು ;

(ಇ) ಈವರೆಗೆ ಎಷ್ಟು ಗೊಲ್ಲರಹಟ್ಟಿಗಳನ್ನು, ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸಲಾಗಿದೆ ?

## ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲು ಕಲಾ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಕುರಿತು

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೮೭೬ (೧೦೪೯) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೪–೧೫ನೇ ಮತ್ತು ೨೦೧೫–೧೬ನೇ ಸಾಲಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲು ರಾಜ್ಯದಲ್ಲಿ ಎಷ್ಟು ಕಲಾ ಸಂಸ್ಥೆಗಳಿಗೆ ಅನುದಾನ ನೀಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಪ್ರತಿ ಕಲಾ ಸಂಸ್ಥೆಯ ವಿವರ ನೀಡುವುದು ;

(ಇ) ಈ ಅನುದಾನ ಹಂಚಿಕೆಗೆ ಅನುಸರಿಸುತ್ತಿರುವ ಮಾನದಂಡಗಳೇನು;

(ಈ) ಈ ಅನುದಾನ ಹಂಚಿಕೆಯಲ್ಲಿ ಹಲವಾರು ಆರೋಪಗಳು ಕೇಳಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದರೆ, ಇದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಗಡಿ ಭಾಗದಲ್ಲಿರುವ ಕನ್ನಡ ಶಾಲೆಗಳ ಅಭಿವೃದ್ಧಿ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೮೭೭ (೧೦೪೭) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗಡಿ ಭಾಗದಲ್ಲಿರುವ ಕನ್ನಡ ಶಾಲೆಗಳ ಅಭಿವೃದ್ಧಿ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು ;

(ಆ) ಈ ಶಾಲೆಗಳ ಸುಧಾರಣೆಗೆ ಯಾವುದಾದರೂ ವಿಶೇಷ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆಯೇ ; (ವಿವರ ನೀಡುವುದು)

(ಇ) ಹೊರ ರಾಜ್ಯಗಳಲ್ಲಿರುವ ಗಡಿ ಪ್ರದೇಶದ ಕನ್ನಡ ಶಾಲೆಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸಲು ಅವಶ್ಯಕ ಅನುದಾನ ಬಿಡುಗಡೆ ಮಾಡಲಾಗುತ್ತಿದೆಯೇ ; ಇದ್ದಲ್ಲಿ, ವಿವರ ನೀಡುವುದು ;

(ಈ) ಹೊರ ರಾಜ್ಯಗಳ ಮತ್ತು ಗಡಿನಾಡಿನ ಮತ್ತು ವಿದ್ಯಾರ್ಥಿಗಳಿಗೆ ನಮ್ಮ ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣ ನೀಡುವ ಸಂದರ್ಭಗಳಲ್ಲಿ ನಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ನೀಡುವ ಸೌಲಭ್ಯಗಳನ್ನು ನೀಡಲಾಗುತ್ತಿದೆಯೇ ;

(ಉ) ಈ ನಿಟ್ಟಿನಲ್ಲಿ ಸರ್ಕಾರದ ಚಿಂತನೆಯೇನು ?

## ಆಹಾರ ಪೂರೈಕೆಗೆ ಟೆಂಡರ್ ಪ್ರಕ್ರಿಯೆಯ ವಿಳಂಬ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೮೭೮ (೧೦೫೦) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ನಡೆಸಲಾಗುತ್ತಿರುವ ವಿವಿಧ ಸಂಸ್ಥೆಗಳಿಗೆ ಆಹಾರ ಪೂರೈಕೆಗೆ ಟೆಂಡರ್ ಪ್ರಕ್ರಿಯೆಯು ಪ್ರತಿ ವರ್ಷ ವಿಳಂಬವಾಗುತ್ತಿದ್ದು, ವಿದ್ಯಾರ್ಥಿನಿಲಯಗಳಿಗೆ ಅವಶ್ಯಕ ಆಹಾರ ಪೂರೈಕೆಯಲ್ಲಿ ವಿಳಂಬವಾಗುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಆಹಾರ ಪೂರೈಕೆಗೆ ಇರುವ ಮಾನದಂಡಗಳೇನು ;

(ಇ) ಯಾವ ಯಾವ ಹಂತಗಳಲ್ಲಿ ಯಾವ ತಿಂಗಳಿನಲ್ಲಿ ಟೆಂಡರ್ ಪ್ರಕ್ರಿಯೆಗಳನ್ನು ನಡೆಸಲಾಗುತ್ತಿದೆ ? (ಈ ವರ್ಷದಲ್ಲಿ ನಡೆಸಲಾಗಿರುವ ಟೆಂಡರ್ ಪ್ರಕ್ರಿಯೆಯ ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)

## ರಾಜ್ಯದಲ್ಲಿ ೧೮ ವರ್ಷದ ಕೆಳಗಿನ ಅಂಗವಿಕಲ/ವಿಕಲಚೇತನ ಮಕ್ಕಳ ಸಮೀಕ್ಷೆ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೮೭೯ (೧೦೪೮) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೧೮ ವರ್ಷದ ಕೆಳಗಿನ ಅಂಗವಿಕಲ/ವಿಕಲಚೇತನ ಮಕ್ಕಳ ಸಮೀಕ್ಷೆ ನಡೆದಿದೆಯೇ ; ನಡೆಸಿದ್ದಲ್ಲಿ, ಜಿಲ್ಲಾವಾರು ಮಾಹಿತಿಯನ್ನು ನೀಡುವುದು ;

(ಆ) ಈ ಮಕ್ಕಳಿಗಾಗಿ ಇರುವ ವಿಶೇಷ ಶಾಲೆಗಳು ಮಕ್ಕಳ ಅನುಪಾತಕ್ಕೆ ಹೊಂದಾಣಿಕೆಯಾಗುವಷ್ಟು ಇವೆಯೇ ;

(ಇ) ಈ ವಿಶೇಷ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆಯೇ ; ಕೊರತೆಯಿರುವ ಶಿಕ್ಷಕರ ಸಂಖ್ಯೆ ಎಷ್ಟು ? (ಮಾಹಿತಿಯನ್ನು ಒದಗಿಸುವುದು)

## ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಅಗತ್ಯ ಔಷಧಿಗಳ ದಾಸ್ತಾನಿನ ಬಗ್ಗೆ

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೮೦ (೯೮) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಜಿಲ್ಲಾ ಆರೋಗ್ಯ ಕೇಂದ್ರಗಳಲ್ಲಿ ತುರ್ತು ಅಗತ್ಯ ಔಷಧಿಗಳು ಲಭ್ಯವಿಲ್ಲದೆ ರೋಗಿಗಳಿಗೆ ಪ್ರಾಣ ಸಂಕಟ ಎದುರಾಗುವ ಪ್ರಸಂಗಗಳು ಸಂಭವಿಸುತ್ತಿರುವುದು ನಿಜವೇ;

(ಆ) ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಜಿಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಲಭ್ಯವಿರುವ ಔಷಧಿಗಳು ಯಾವುವು ;

(ಇ) ಔಷಧಿಗಳ ಕೊರತೆಯಿಂದ ಖಾಸಗಿ ಮೆಡಿಕಲ್ ಸ್ಟೋರ್‌ಗಳಿಗೆ ರೋಗಿಗಳನ್ನು ಕಳುಹಿಸುತ್ತಿರುವುದರಿಂದ ಬಡ ರೋಗಿಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

(ಈ) ರೇಬಿಸ್ ಮತ್ತು ಹಾವು ಕಡಿತದಂತಹ ಚಿಕಿತ್ಸೆಗೆ ಅಗತ್ಯವಿರುವ ಪ್ರಾಣ ರಕ್ಷಕ ಔಷಧಗಳನ್ನು ಅಗತ್ಯ ಪ್ರಮಾಣದಲ್ಲಿ ಮತ್ತು ಸೂಕ್ತ ಸಮಯದಲ್ಲಿ ಲಭ್ಯವಿರುವಂತೆ ಮಾಡಲು ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ ?

## ಆರೋಗ್ಯ ಇಲಾಖೆಯಲ್ಲಿನ ಆಹಾರ ಸುರಕ್ಷತಾ ಕಾಯ್ದೆಯ ಅನುಷ್ಠಾನದ ಬಗ್ಗೆ

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೮೧ (೧೦೧೧) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಆರೋಗ್ಯ ಇಲಾಖೆಯಲ್ಲಿನ ಆಹಾರ ಸುರಕ್ಷತಾಲಯ (ಸಾರ್ವಜನಿಕ ಆರೋಗ್ಯ ಸಂಸ್ಥೆ) ಇಲ್ಲಿ ಸಾಕಷ್ಟು ಸ್ಥಳವಕಾಶವಿದ್ದರೂ ಸಹ ಏಳು ಅಧೀನ ಕಛೇರಿಗಳನ್ನು ಬೆಂಗಳೂರು ಕೊಳಚೆ ನಿರ್ಮೂಲನ ಮಂಡಳಿಯಲ್ಲಿ ಲಕ್ಷಾಂತರ ರೂಪಾಯಿ ಮಾಸಿಕ ಬಾಡಿಗೆ ಪಾವತಿಸಿ ನಡೆಸಲಾಗುತ್ತಿದ್ದು, ಈ ಸಂಬಂಧ ನಷ್ಟ ಉಂಟು ಮಾಡಿರುವ ಆಹಾರ ಸುರಕ್ಷತಾಲಯದ ಆಡಳಿತ ಅಧಿಕಾರಿಯ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗುವುದು ; (ವಿವರ ಒದಗಿಸುವುದು)

(ಆ) ಆರೋಗ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಥಮ ದರ್ಜೆ ಸಹಾಯಕರು, ಜಿಲ್ಲಾ ತರಬೇತಿ ಕೇಂದ್ರ, ಹಾಸನದಿಂದ ಅಂಕಿತ ಅಧಿಕಾರಿಗಳ ಕಛೇರಿ, ಮೈಸೂರು ಇಲ್ಲಿಗೆ ಚಾಲ್ತಿಯಲ್ಲಿರುವ ಕೌನ್ಸಿಲಿಂಗ್ ನಿಯಮವನ್ನು ಉಲ್ಲಂಘಿಸಿ ನೇಮಕ ಮಾಡಲಾಗಿದ್ದು, ಈ ಬಗ್ಗೆ ಸುರಕ್ಷತಾಲಯದ ಆಡಳಿತ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗುವುದು ; (ವಿವರ ಒದಗಿಸುವುದು)

(ಇ) ಆಹಾರ ಸುರಕ್ಷತಾಲಯ ಮತ್ತು ರಾಜ್ಯಾದಂತವಿರುವ ಮೂವತ್ತಾರು (೩೬) ಅಂಕಿತಾಧಿಕಾರಿಗಳ ಕಛೇರಿಗಳಲ್ಲಿ ಪ್ರಾರಂಭವಾದ ದಿನದಿಂದ ಇದುವರೆಗೂ ಹಲವಾರು ವರ್ಷಗಳಿಂದ ಯಾವುದೇ ಆಡಿಟ್ ಹಾಗೂ ತಪಾಸಣೆ ಮಾಡದೇ ಇರುವುದರಿಂದ ಪಾರದರ್ಶಕ ಕಾಯ್ದೆ ಉಲ್ಲಂಘನೆ, ಅನುದಾನ ದುರ್ಬಳಕೆ, ಅಸಮರ್ಪಕ ಕಡತ ನಿರ್ವಹಣೆ ಹಾಗೂ ಅವ್ಯವಹಾರ ಸಂಬಂಧ ಇಲಾಖೆಯಲ್ಲಿನ ಜಾಗೃತ ಕೋಶದಿಂದ ತಪಾಸಣೆ ನಡೆಸಲು ಸರ್ಕಾರಕ್ಕೆ ಏನು ತೊಂದರೆ ಇದೆ ; ಹಾಗಿದ್ದಲ್ಲಿ, ಯಾವಾಗ ಈ ಬಗ್ಗೆ ಆದೇಶ ಹೊರಡಿಸಲಾಗುವುದು ;

(ಈ) ಆಹಾರ ಸುರಕ್ಷತಾಧಿಕಾರಿಗಳು ಎಷ್ಟು ವರ್ಷಗಳಿಂದ ರಹಸ್ಯ ವರದಿ ಮತ್ತು ಆಸ್ತಿ ಘೋಷಣೆಯನ್ನು ಸಲ್ಲಿಸಿರುವುದಿಲ್ಲ, ಇವುಗಳನ್ನು ಪಡೆಯುವಲ್ಲಿ ವಿಫಲರಾಗಿರುವ ಆಹಾರ ಸುರಕ್ಷತಾಲಯದ ಆಡಳಿತ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗುವುದು ? (ವಿವರ ಒದಗಿಸುವುದು)

## ಉಡುಪಿ ಜಿಲ್ಲೆಯಲ್ಲಿ ಸುಸಜ್ಜಿತ ಕೆಎಸ್‌ಆರ್‌ಟಿಸಿ ನಿಲ್ದಾಣ ಪ್ರಾರಂಭಿಸುವ ಬಗ್ಗೆ

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೮೨ (೧೦೦೦) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯ ಹೃದಯ ಭಾಗದಲ್ಲಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆಯ ಬಸ್ ತಂಗುದಾಣ ಕಿರಿದಾಗಿದ್ದು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಕ್ರಮವೇನು ;

(ಇ) ಉಡುಪಿ ಜಿಲ್ಲೆಯಲ್ಲಿ ಸುಸಜ್ಜಿತವಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆಯ ಬಸ್ ತಂಗುದಾಣ ನಿರ್ಮಾಣದ ಬಗ್ಗೆ ಸರ್ಕಾರದ ಯೋಜನೆಗಳೇನು ?

## ಸರ್ಕಾರಿ ಇಲಾಖೆಯಲ್ಲಿ ಕನ್ನಡ ಅನುಷ್ಠಾನದ ಕುರಿತು

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೮೩ (೯೯) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸರ್ಕಾರಿ ಕಛೇರಿಗಳಲ್ಲಿ ಮತ್ತು ಕಾಲೇಜುಗಳಲ್ಲಿ ಕನ್ನಡ ಅನುಷ್ಠಾನ ಮಾಡುವ ಬಗ್ಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ತನ್ನ ವರದಿಯನ್ನು ನೀಡಿದೆಯೇ ; ಹೌದಾದಲ್ಲಿ, ವರದಿಯಲ್ಲಿನ ಪ್ರಮುಖ ಶಿಫಾರಸ್ಸುಗಳೇನು ;

(ಆ) ಸರ್ಕಾರಿ ಕಛೇರಿಗಳಲ್ಲಿ ಮತ್ತು ಕಾಲೇಜು, ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರ ಕೈಗೊಂಡ ಕ್ರಮವೇನು; (ಸಂಪೂರ್ಣ ವಿವರ ಒದಗಿಸುವುದು)

(ಇ) ಸರ್ಕಾರದ ಆದೇಶದ ಹೊರತಾಗಿಯೂ ರಾಜ್ಯದ ಸರ್ಕಾರಿ ಇಲಾಖೆಯ ಉನ್ನತಮಟ್ಟದಲ್ಲಿ ಆಡಳಿತದಲ್ಲಿ ಆಂಗ್ಲಭಾಷೆ ಬಳಸುತ್ತಿರುವುದು ಹಾಗೂ ಇದರಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ?

## ಹಿಂದುಳಿದ ವರ್ಗಗಳ ವಸತಿ ಶಾಲೆಗಳ ಮೂಲಭೂತ ಸೌಲಭ್ಯ ಕೊರತೆ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೮೪ (೧೦೨೧) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಹಿಂದುಳಿದ ವರ್ಗಗಳ ವಸತಿ ಶಾಲೆಗಳು ಮೂಲಭೂತ ಸೌಕರ್ಯಗಳ ಕೊರತೆಯಿಂದ, ಸ್ವಚ್ಛತೆಯ ನಿರ್ಲಕ್ಷ್ಯತೆಯಿಂದ ವಿದ್ಯಾರ್ಥಿಗಳು ತೊಂದರೆ ಅನುಭವಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ವಸತಿ ಶಾಲೆಗಳ ಶೋಚನೀಯ ಸ್ಥಿತಿ ಸರಿಪಡಿಸುವ ನಿಟ್ಟಿನಲ್ಲಿ ಇವುಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ; ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು ಎಷ್ಟು ವಸತಿ ಶಾಲೆಗಳಿವೆ ; ಅವು ಯಾವುವು ;

(ಇ) ಬೆಳಗಾವಿ ಜಿಲ್ಲೆಯ ವಸತಿ ಶಾಲೆಗಳಲ್ಲಿ ಓದುತ್ತಿರುವ ಒಟ್ಟು ವಿದ್ಯಾರ್ಥಿಗಳು ಎಷ್ಟು ; (ವಿವರ ನೀಡುವುದು)

(ಈ) ೨೦೧೫–೧೬ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯ ವಸತಿ ಶಾಲೆಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸಲು ಬಿಡುಗಡೆಯಾದ ಅನುದಾನವೆಷ್ಟು; ಅದರಲ್ಲಿ ಬಳಕೆಯಾದ ಅನುದಾನವೆಷ್ಟು ; ಬಳಕೆಯಾಗದೆ ಇರುವ ಅನುದಾನವೆಷ್ಟು ?

## ಬೆಳಗಾವಿ ಜಿಲ್ಲೆಯ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಸಿಬ್ಬಂದಿ ಕೊರತೆ ಕುರಿತು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೮೫ (೧೦೧೫) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆಯ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಸಿಬ್ಬಂದಿ ಕೊರತೆಯಿಂದ ಸಾರ್ವಜನಿಕರ ವಾಹನ ನೋಂದಣಿ, ಚಾಲನಾ ಪರವಾನಗಿ/ನವೀಕರಣ, ವಾಹನ ಫಿಟ್ನೆಸ್ ಪ್ರಮಾಣ ಪತ್ರ ಇತರೆ ಕಛೇರಿಯ ದೈನಂದಿನ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಬೆಳಗಾವಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಪ್ರಾದೇಶಿಕ ಸಾರಿಗೆ ಕಛೇರಿಗಳೆಷ್ಟು ; ಸದರಿ ಕಛೇರಿಗಳಿಗೆ ಮಂಜೂರಾದ ಹುದ್ದೆಗಳೆಷ್ಟು ; ಈಗಾಗಲೇ ಭರ್ತಿ ಮಾಡಿರುವ ಹುದ್ದೆಗಳೆಷ್ಟು ; ಸದ್ಯ ಖಾಲಿ ಇರುವ ಹುದ್ದೆಗಳೆಷ್ಟು ;

(ಇ) ಖಾಲಿ ಹುದ್ದೆಗಳನ್ನು ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಲಾಗುವುದು ?

## ಬಿ.ಪಿ.ಎಲ್ ಕಾರ್ಡ್‌ದಾರರಿಗೆ ರಿಯಾಯಿತಿ ದರದಲ್ಲಿ ಗ್ಯಾಸ್ ಸಂಪರ್ಕ ಕಲ್ಪಿಸುವ ಕುರಿತು

ಶ್ರೀ **ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೮೬ (೧೦೧೩) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನೆರೆಯ ರಾಜ್ಯಗಳಾದ ಆಂಧ್ರ ಪ್ರದೇಶ ಮತ್ತು ತಮಿಳುನಾಡಿನಲ್ಲಿ ಜಾರಿಯಲ್ಲಿ ಇರುವಂತೆ ಬಿಪಿಎಲ್ ಕಾರ್ಡ್‌ದಾರರಿಗೆ ರಿಯಾಯಿತಿ ದರದಲ್ಲಿ ಗ್ಯಾಸ್ ಸಂಪರ್ಕ ಕಲ್ಪಿಸುವ ಯೋಜನೆ ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ, ೨೦೧೬–೧೭ನೇ ಸಾಲಿನಲ್ಲಿ ಎಷ್ಟು ಜನ ಬಿ.ಪಿ.ಎಲ್ ಕಾರ್ಡುದಾರರಿಗೆ ಈ ಯೋಜನೆಯನ್ನು ಕಲ್ಪಿಸಲಾಗುವುದು ;

(ಇ) ಫಲಾನುಭವಿಗಳ ಆಯ್ಕೆಗೆ ಇರುವ ಮಾನದಂಡಗಳೇನು ;

(ಈ) ೨೦೧೬–೧೭ನೇ ಸಾಲಿನಲ್ಲಿ ಈ ಯೋಜನೆಗೆ ಎಷ್ಟು ಅನುದಾನ ಕಾಯ್ದಿರಿಸಲಾಗಿದೆ ?

## ಮೂತ್ರ ಪಿಂಡ ಕಸಿ ಶಸ್ತ್ರಚಿಕಿತ್ಸಾ ಕಾನೂನು ನಿಯಮ ಕುರಿತು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೮೭ (೧೦೧೨) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಸಕ್ತ ಚಾಲ್ತಿಯಲ್ಲಿರುವ ಮೂತ್ರ ಪಿಂಡ ಕಸಿ ಶಸ್ತ್ರ ಚಿಕಿತ್ಸಾ ಕಾನೂನು ವಿಧಾನದಿಂದ ಮೂತ್ರ ಪಿಂಡ ವೈಫಲ್ಯದಿಂದ ಬಳಲುತ್ತಿರುವವರು ದಾನಿಗಳಿಂದ ಮೂತ್ರ ಪಿಂಡ ಪಡೆಯಲು ಸಾಧ್ಯವಾಗದೇ ಸಾವನ್ನಪ್ಪುತ್ತಿರುವುದು, ಸಂಕಷ್ಟದಿಂದ ಸಾವು ಬದುಕಿನ ನಡುವೆ ಬಳಲುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಪ್ರಸಕ್ತ ಕಾನೂನು ವಿಧಾನದಿಂದ ಸದರಿ ರೋಗಿಗಳನ್ನು ರಕ್ಷಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ; ಈ ಕಠಿಣ ಕಾನೂನನ್ನು ತಿದ್ದುಪಡಿ ಮಾಡಿ ಸರಳೀಕರಣಗೊಳಿಸುವ ವಿಚಾರ ಸರ್ಕಾರದ ಮುಂದಿದೆಯೇ ;

(ಇ) ಹಾಗಿದ್ದಲ್ಲಿ, ದಾನಿಗಳಿಂದ ಕಿಡ್ನಿ ಪಡೆಯಲು ಇರುವ ಪ್ರಸಕ್ತ ಕಾನೂನಿನ ನಿಯಮಗಳೇನು ; ಸರಳೀಕರಣಗೊಳಿಸಲಿರುವ ಕಾನೂನು ತಿದ್ದುಪಡಿಗಳೇನು ? (ವಿವರ ನೀಡುವುದು)

## ರಾಜ್ಯದಲ್ಲಿ ಸಿ.ಎಸ್.ಆರ್. ಯೋಜನೆಯಡಿ ಗ್ಯಾಸ್ ನೀಡುವ ಕುರಿತು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೮೮ (೧೦೧೪) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಮ್ಮ ರಾಜ್ಯದಲ್ಲಿ ಸಿ.ಎಸ್.ಆರ್. (ಅನಿಲ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆಯ ರಿಯಾಯಿತಿ ದರ) ಯೋಜನೆಯಡಿ ಬಿ.ಪಿ.ಎಲ್ ಕಾರ್ಡ್‌ದಾರರಿಗೆ ನೀಡುತ್ತಿರುವ ಗ್ಯಾಸ್ ಸಂಪರ್ಕ ಯೋಜನೆಯು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳದೆ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ಯೋಜನೆಯಡಿ ಬೆಳಗಾವಿ ಜಿಲ್ಲೆಗೆ ಎಷ್ಟು ಫಲಾನುಭವಿಗಳ ಗುರಿ ನಿಗಧಿಪಡಿಸಿದೆ ; ಈಗಾಗಲೇ ಎಷ್ಟು ಜನ ಫಲಾನುಭವಿಗಳಿಗೆ ಗ್ಯಾಸ್ ಸಂಪರ್ಕ ನೀಡಲಾಗಿದೆ ; (ತಾಲ್ಲೂಕುವಾರು ಫಲಾನುಭವಿಗಳ ವಿವರ ನೀಡುವುದು)

(ಇ) ಸರ್ಕಾರ ರೂಪಿಸಿರುವ ಮಾನದಂಡಗಳಿಗೆ ಅನುಗುಣವಾಗಿ ಅನಿಲ ಕಂಪನಿಗಳು ಈ ಯೋಜನೆಯಡಿ ಬಿ.ಪಿ.ಎಲ್ ಕಾರ್ಡ್‌ದಾರರಿಗೆ ಗ್ಯಾಸ್ ಸಂಪರ್ಕ ವಿತರಿಸುತ್ತಿವೆಯೇ ; ಸರ್ಕಾರ ನಿಗಧಿಪಡಿಸಿದ ಮಾನದಂಡಗಳೇನು ?

## ೧೦೮ ಸಿಬ್ಬಂದಿಗಳ ಸಮಸ್ಯೆಗಳ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೮೮೯ (೧೦೧೬) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಆರೋಗ್ಯ ಕವಚ–೧೦೮ ಅಂಬಲೆನ್ಸ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ (ಕಾರ್ಮಿಕ ಕಾಯ್ದೆಯ ಪ್ರಕಾರ) ನಿಗದಿಪಡಿಸಿದ ವೇತನ ಎಷ್ಟು ;

(ಆ) ಈ ವೇತನವು ಕಾರ್ಮಿಕರ ಕಾಯ್ದೆಯ ಪ್ರಕಾರ ಕನಿಷ್ಠ ವೇತನಕ್ಕೆ ಅನುಗುಣವಾಗಿದೆಯೇ ;

(ಇ) ನಿಗಧಿತ ಅವಧಿಗಿಂತ ಹೆಚ್ಚುವರಿಯಾಗಿ ಸಲ್ಲಿಸಿದ ಸೇವೆಗೆ ಹೆಚ್ಚುವರಿ ವೇತನ ನೀಡಲು ಅವಕಾಶ ಕಲ್ಪಿಸಲಾಗಿದೆಯೇ ;

(ಈ) ಕಾರ್ಮಿಕರ ಕಾಯ್ದೆಯ ಪ್ರಕಾರ ಕನಿಷ್ಠ ವೇತನ ಮತ್ತು ಹೆಚ್ಚುವರಿ ಕರ್ತವ್ಯದ ಅವಧಿಯ ವೇತನ ಸಂದಾಯ ಮಾಡಲು ಬಾಕಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಕಾರ್ಮಿಕರಿಗೆ ಬಾಕಿ ಇರುವ ವೇತನವನ್ನು ಸಂದಾಯ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ರಸ್ತೆ ಸಾರಿಗೆ ಡಿಪೋ ಹಾಗೂ ಬಸ್ಸುಗಳ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೮೯೦ (೧೦೨೦) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸೇರಿದ ಎಷ್ಟು ಡಿವಿಜನ್ ಹಾಗೂ ಡಿಪೋಗಳಿವೆ ; (ವಿಭಾಗವಾರು ಮತ್ತು ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಪ್ರತಿ ವಿಭಾಗ ಹಾಗೂ ಡಿಪೋದಲ್ಲಿರುವ ಐರಾವತ ಹಾಗೂ ಸ್ಲೀಪರ್ ಬಸ್ಸುಗಳ ಸಂಖ್ಯೆ ಎಷ್ಟು ? (ವೇಳೆ ಸಮೇತ ಎಲ್ಲಿಂದ ಎಲ್ಲಿಗೆ ಸಂಚರಿಸುತ್ತಿದೆ ಎಂಬ ವಿವರ ನೀಡುವುದು)

## ತುಮಕೂರು ಜಿಲ್ಲೆಗೆ ಬಿ.ಪಿ.ಎಲ್ ಕಾರ್ಡ್

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೯೧ (೧೦೧೯) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಕಡುಬಡವರಿಗೆ ಬಿ.ಪಿ.ಎಲ್ ಕಾರ್ಡ್‌ಗಳು ಸಿಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಅರ್ಹ ಕಡಬಡವರು ಅರ್ಜಿ ಸಲ್ಲಿಸಿದ್ದರೂ ಕಾರ್ಡ್‌ಗಳು ವಿಲೇವರಿ ಆಗದೆ ಇರುವುದರ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

(ಇ) ಜಿಲ್ಲೆಯಲ್ಲಿ ನೀಡಿರುವ ಬಿ.ಪಿ.ಎಲ್ ಹಾಗೂ ಎ.ಪಿ.ಎಲ್ ಕಾರ್ಡ್‌ಗಳ ಸಂಖ್ಯೆ ಎಷ್ಟು ; (ತಾಲ್ಲೂಕು ಹಾಗೂ ಗ್ರಾಮವಾರು ವಿವರ ನೀಡುವುದು)

(ಈ) ಇದುವರೆಗೆ ಕಾರ್ಡುಗಳು ಸಿಗದೆ ಇರುವವರ ಸಂಖ್ಯೆ ಎಷ್ಟು ; (ಪ್ರತ್ಯೇಕ ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

(ಉ) ಸದರಿ ಕಾರ್ಡ್‌ಗಳ ಸಮರ್ಪಕ ವಿಲೇವಾರಿ ಬಗ್ಗೆ ಎಷ್ಟು ದಿನಗಳಲ್ಲಿ ಸರ್ಕಾರ ಕ್ರಮಕೈಗೊಳ್ಳುವುದು ?

## ಶಾಸಕರ ಪ್ರದೇಶಾಭಿವೃದ್ಧಿ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೯೨ (೧೦೧೮) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಾಸಕರ ಪ್ರದೇಶಾಭಿವೃದ್ಧಿ ನಿಧಿ ಬಳಕೆಗೆ ಇರುವ ಮಾನದಂಡಗಳೇನು ; (ವಿವರ ನೀಡುವುದು) ಇದನ್ನು ಯಾವಾಗ ಪರಿಷ್ಕರಿಸಲಾಗಿತ್ತು ಹಾಗೂ ಪರಿಷ್ಕರಿಸಲು ಕಾರಣಗಳೇನು ;

(ಆ) ಈ ಪರಿಷ್ಕರಣೆಯಿಂದ ಗೊಂದಲಗಳು ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ಗೊಂದಲ ನಿವಾರಣೆಗೆ ಸರ್ಕಾರ ಏನು ಕ್ರಮಕೈಗೊಂಡಿದೆ?

## ತುಮಕೂರು ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಅನುದಾನ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೮೯೩ (೧೦೧೭) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಯಾವ ಯಾವ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ ; (ವಿವರ ನೀಡುವುದು)

(ಆ) ಇದ್ದಲ್ಲಿ, ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಎಷ್ಟು ಹುದ್ದೆಗಳನ್ನು ಸೃಷ್ಟಿಸಿದೆ ; ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ; ಎಷ್ಟು ಹುದ್ದೆಗಳು ಖಾಲಿ ಇವೆ ;

(ಇ) ಹಾಗಿದ್ದಲ್ಲಿ, ಮಂಜೂರಾದ ಹುದ್ದೆ ಕಡಿಮೆ ಇದ್ದು ಖಾಲಿ ಹುದ್ದೆಗಳು ಭರ್ತಿಯಾಗದೆ ಸರ್ಕಾರದ ಅನೇಕ ಕಾರ್ಯಕ್ರಮಗಳು ಸಮರ್ಪಕವಾಗಿ ಅನುಷ್ಠಾನಕ್ಕೆ ಬಾರದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಅವಶ್ಯವಿರುವ ಹುದ್ದೆಗಳನ್ನು ಭರ್ತಿ ಮಾಡಿ ಅಭಿವೃದ್ಧಿ ಕಾರ್ಯಕ್ರಮಗಳು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸರ್ಕಾರದಿಂದ ಕ್ರಮಕೈಗೊಳ್ಳುವುದೇ ?

## ಬಿ.ಪಿ.ಎಲ್ ಕಾರ್ಡುಗಳ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):–**

೮೯೪ (೧೦೭೨) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ಅನರ್ಹ ಬಿ.ಪಿ.ಎಲ್ ಕಾರ್ಡುಗಳನ್ನು ರದ್ದುಪಡಿಸಲಾಗಿದೆ ; (ಜಿಲ್ಲಾವಾರು ವಿವರ ಒದಗಿಸುವುದು)

(ಆ) ಸರ್ಕಾರಿ ನೌಕರರು ಸಹ ಬಿ.ಪಿ.ಎಲ್ ಕಾರ್ಡು ಹೊಂದಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಅಂತ ಅನರ್ಹ ಕಾರ್ಡುಗಳನ್ನು ರದ್ದುಪಡಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಈ) ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಎಷ್ಟು ಅನರ್ಹ ಕಾರ್ಡುಗಳನ್ನು ರದ್ದುಪಡಿಸಲಾಗಿದೆ ;

(ಉ) ಅರ್ಹ ಪಡಿತರದಾರರಿಗೆ ಇನ್ನು ಎಷ್ಟು ಬಿ.ಪಿ.ಎಲ್. ಕಾರ್ಡುಗಳನ್ನು ಕೊಡಲಾಗುವುದು ?

## ಬೆಳಗಾವಿ ವೈದ್ಯಕೀಯ ಕಾಲೇಜಿನಲ್ಲಿ ಇರುವ ಹಳೆ ಸಿವಿಲ್ ಆಸ್ಪತ್ರೆ ಕಟ್ಟಡವನ್ನು ನವೀಕರಣಗೊಳಿಸುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):–**

೮೯೫ (೧೦೭೪) ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಹಳೆ ಸಿವಿಲ್ ಆಸ್ಪತ್ರೆ ಕಟ್ಟಡವನ್ನು ಎಷ್ಟು ವರ್ಷಗಳ ಹಿಂದೆ ಕಟ್ಟಲಾಯಿತು ;

(ಆ) ಈಗ ಆ ಕಟ್ಟಡ ಶಿಥಿಲಾವಸ್ಥೆಯಲ್ಲಿ ಇದ್ದು ದುರಸ್ಥಿಗೊಳಿಸುವುದು ಅತೀ ಅವಶ್ಯವಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಅಲ್ಲಿ ಯಾವ ಯಾವ ಮೂಲಭೂತ ಸೌಕರ್ಯಗಳು ಅತೀ ಅವಶ್ಯವಿರುತ್ತವೆ ;

(ಈ) ಆ ಕಟ್ಟಡವನ್ನು ನವೀಕರಿಸಿ ಮೂಲಭೂತ ಸೌಕರ್ಯ ಒದಗಿಸಲು ಮುಂದಿನ ವರ್ಷದ ಆಯವ್ಯಯದಲ್ಲಿ ಹಣ ಬಿಡುಗಡೆ ಮಾಡಲಾಗುವುದೇ ?

## ಸಾರಿಗೆ ಇಲಾಖೆಯಲ್ಲಿ ಹೊಸ ಮಾದರಿಯ ಬಸ್ಸುಗಳು ಕೇವಲ ಬೆಂಗಳೂರಿಗೆ ಮಾತ್ರ ಸೀಮಿತವಾಗಿರುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):–**

೮೯೬ (೧೦೭೩) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಾರಿಗೆ ಇಲಾಖೆಯ ಎಲ್ಲಾ ಹೊಸ ಮಾದರಿಯ ಬಸ್ಸುಗಳನ್ನು ಕೇವಲ ಬೆಂಗಳೂರು ನಗರದಲ್ಲಿ ಓಡಿಸುತ್ತಿದ್ದು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಈ ಯೋಜನೆ ಕೈಗೊಳ್ಳದೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ತಾಲ್ಲೂಕು ಹಾಗೂ ಜಿಲ್ಲಾ ಸ್ಥಳಗಳಲ್ಲಿ ನಿಷ್ಕ್ರಿಯವಾದ ವಾಹನಗಳನ್ನು ಓಡಿಸುತ್ತಿದ್ದು ಹೊಸ ವಿನೂತನ ವಾಹನಗಳನ್ನು ಕೇವಲ ಬೆಂಗಳೂರು ನಗರದಲ್ಲಿ ಮಾತ್ರ ಓಡಿಸುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬೆಂಗಳೂರಿನಲ್ಲಿ ಓಡಿಸುತ್ತಿರುವ ವಿನೂತನ ಮಾದರಿಯ ವಾಹನಗಳಂತೆ ತಾಲ್ಲೂಕು ಹಾಗೂ ಜಿಲ್ಲಾಘಟಕದಿಂದ ಬೆಂಗಳೂರಿಗೆ ಹಾಗೂ ಹೊರ ರಾಜ್ಯಗಳಿಗೆ ಹೋಗುವ ವಾಹನಗಳನ್ನು ವಿನೂತನ ಮಾದರಿಯ ವಾಹನಗಳಾಗಿ ಓಡಿಸಲು ಕ್ರಮ ಕೈಗೊಳ್ಳಲಾಗುವುದೇ?

## ಇಲಾಖೆಗಳಿಗೆ ೨೦೧೫-೧೬ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿದ ಹಾಗೂ ಸರ್ಕಾರದಿಂದ ಹಣ ಬಿಡುಗಡೆಯಾದ ಮತ್ತು ಖರ್ಚಾದ ಹಣ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):-**

೮೯೭ (೧೦೭೫) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸರ್ಕಾರದ ವಿವಿಧ ಇಲಾಖೆಗಳಾದ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಇಲಾಖೆ, ವಸತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಲೋಕೋಪಯೋಗಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಲಸಂಪನ್ಮೂಲ, ಸಣ್ಣ ನೀರಾವರಿ, ಪ್ರವಾಸೋದ್ಯಮ, ಕಂದಾಯ ಹಾಗೂ ತೋಟಗಾರಿಕೆ ಇಲಾಖೆಗಳಿಗೆ ೨೦೧೫-೧೬ನೇ ಸಾಲಿನ ಆಯವ್ಯಯದಲ್ಲಿ ಎಷ್ಟು ಹಣ ಒದಗಿಸಲಾಗಿತ್ತು ;

(ಆ) ಅದರಲ್ಲಿ ಎಷ್ಟು ಹಣ ಇಲಾಖೆಗಳಿಗೆ ಬಿಡುಗಡೆಯಾಗಿದೆ ; (ಇಲಾಖಾವಾರು ವಿವರ ನೀಡುವುದು)

(ಇ) ಬಿಡುಗಡೆಯಾದ ಹಣದಲ್ಲಿ ಇಲಾಖೆಯವರು ವೆಚ್ಚಮಾಡಲಾಗಿರುವ ಹಣವೆಷ್ಟು ? (ವಿವರ ನೀಡುವುದು)

## ಉಡುಪಿ ಜಿಲ್ಲೆಯ ತಾಲ್ಲೂಕುಗಳಲ್ಲಿ ಸರ್ಕಾರಿ ಸಿಟಿ ಬಸ್ಸು ಸಂಚಾರ ಪ್ರಾರಂಭ ಮಾಡುವ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೯೮ (೯೭೦) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯ ಕುಂದಾಪುರ, ಕಾರ್ಕಳ ಹಾಗೂ ಉಡುಪಿ ತಾಲ್ಲೂಕುಗಳಲ್ಲಿ ಸರ್ಕಾರಿ ಸಿಟಿ ಬಸ್ಸುಗಳು ಸಂಚರಿಸುತ್ತಿರುವ ರಹದಾರಿಗಳು ಎಷ್ಟು ; ಮತ್ತು ಯಾವುವು ; ಸರ್ಕಾರಿ ಸಿಟಿ ಬಸ್ಸುಗಳು ಸಂಚರಿಸುತ್ತಿಲ್ಲವಾದಲ್ಲಿ, ಕಾರಣಗಳೇನು ;

(ಆ) ಉಡುಪಿ ಜಿಲ್ಲೆಯ ಕುಂದಾಪುರ, ಕಾರ್ಕಳ ಹಾಗೂ ಉಡುಪಿ ತಾಲ್ಲೂಕುಗಳಲ್ಲಿ ಗ್ರಾಮಾಂತರ ಪ್ರದೇಶದ ಕಾಲೇಜು ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಅನುಕೂಲವಾಗುವಂತೆ ಸರ್ಕಾರಿ ಸಿಟಿ ಬಸ್ಸುಗಳನ್ನು ನೀಡುವ ಯೋಜನೆ ಸರ್ಕಾರ ಮುಂದಿದೆಯೇ ; ಇಲ್ಲವಾದಲ್ಲಿ, ಕಾರಣವೇನು ?

## ಉಡುಪಿ ತಾಲ್ಲೂಕು ಕೇಂದ್ರಗಳ ಪಡಿತರ ವಿತರಣೆಯಾಗುತ್ತಿರುವ ವ್ಯತ್ಯಯಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೯೯ (೯೭೯) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯಲ್ಲಿ ತಾಲ್ಲೂಕು ಕೇಂದ್ರಗಳಿಂದ ಪಡಿತರ ವಿತರಣಾ ಕೇಂದ್ರಗಳಿಗೆ ಪಡಿತರ ವಿತರಣೆ ಮಾಡುವ ಸಂದರ್ಭದಲ್ಲಿ ಕೆಲವೊಂದು ಕಡೆಗೆ ಪಡಿತರಗಳು ಹೆಚ್ಚು ವಿತರಣೆಯಾಗುವುದು ಹಾಗೂ ಕೆಲವೊಂದು ಕಡೆಗೆ ಪಡಿತರಗಳು ಕಡಿಮೆ ವಿತರಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೈಗೊಂಡಿರುವ ಕ್ರಮಗಳೇನು ; ತನಿಖೆ ಮಾಡಲಾಗಿದೆಯೇ ; ಇಲ್ಲವಾದಲ್ಲಿ, ತನಿಖೆ ಮಾಡಲಾಗುವುದೇ ;

(ಆ) ಉಡುಪಿ ಜಿಲ್ಲೆಯಲ್ಲಿ ತಾಲ್ಲೂಕು ಕೇಂದ್ರಗಳಿಂದ ಪಡಿತರ ವ್ಯವಸ್ಥೆಗಳು ಪಡಿತರ ವಿತರಣಾ ಕೇಂದ್ರಗಳಿಗೆ ಹೆಚ್ಚು-ಕಡಿಮೆ ವಿತರಣೆಯಾಗುತ್ತಿರುವುದು ಇಲಾಖೆಯ ಗಮನಕ್ಕೆ ಬಂದರೂ ಸಹ ಅದನ್ನು ಸರಿಪಡಿಸದಿರಲು ಕಾರಣವೇನು ; ಇದರಿಂದ ಪಡಿತರ ವಿತರಣೆಯಲ್ಲಿ ವ್ಯತ್ಯೆಯವಾಗುವುದಿಲ್ಲವೇ ;

(ಇ) ಮೇಲಿನ ಪ್ರಕರಣಗಳ ತನಿಖೆಗೆ ವ್ಯವಸ್ಥೆಗಳಿವೆಯೇ ; ಇದ್ದಲ್ಲಿ, ಯಾವುವು ; ಇಲ್ಲವಾದಲ್ಲಿ, ವ್ಯವಸ್ಥೆ ಕಲ್ಪಿಸಲಾಗುವುದೇ ?

## ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿನ ವಿವಿಧ ದರ್ಜೆ ಆರೋಗ್ಯ ಕೇಂದ್ರಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೦೦ (೯೭೩) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ದರ್ಜೆಯ ಸರ್ಕಾರಿ ಆರೋಗ್ಯ ಕೇಂದ್ರಗಳು ಎಷ್ಟು ಮತ್ತು ಅವು ಯಾವುವು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ದರ್ಜೆಯ ಸಿಬ್ಬಂದಿಗಳ ಸಂಖ್ಯೆ ಎಷ್ಟು ; ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಕೊರತೆ ಇರುವ ವೈದ್ಯರುಗಳ ಸಂಖ್ಯೆ ಎಷ್ಟು; ಈ ಕೊರತೆಯನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ; (ತಾಲ್ಲೂಕುವಾರು, ಆರೋಗ್ಯ ಕೇಂದ್ರವಾರು ವಿವರ ನೀಡುವುದು)

(ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಈ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ದರ್ಜೆಯ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಕಳೆದ ಒಂದು ವರ್ಷದಲ್ಲಿ ಚಿಕಿತ್ಸೆಗಾಗಿ ಭೇಟಿ ನೀಡಿದ ರೋಗಿಗಳ ಸಂಖ್ಯೆ ಎಷ್ಟು ; (ಮಾಸಿಕವಾರು, ಆರೋಗ್ಯ ಕೇಂದ್ರವಾರು, ತಾಲ್ಲೂಕುವಾರು ವಿವರ ನೀಡುವುದು)

(ಈ) ಕಳೆದ ಒಂದು ವರ್ಷಗಳಲ್ಲಿ ಈ ವಿವಿಧ ದರ್ಜೆಯ ಸರ್ಕಾರಿ ಆರೋಗ್ಯ ಕೇಂದ್ರಗಳಿಗೆ ಬಿಡುಗಡೆಯಾದ ಔಷಧಿಗಳ ಪ್ರಮಾಣವೆಷ್ಟು; ಹೆಚ್ಚಿನ ಆರೋಗ್ಯ ಕೇಂದ್ರಗಳಲ್ಲಿ ಔಷಧಿಗಳ ಕೊರತೆ ಇರುವುದನ್ನು ಸರ್ಕಾರ ಗಮನಿಸಿದೆಯೇ ; ಗಮನಿಸಿದ್ದಲ್ಲಿ, ಕೊರತೆ ಇರುವ ಔಷಧಿಗಳ ಪೂರೈಕೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ? (ಮಾಸಿಕವಾರು ವಿವರ ನೀಡುವುದು)

## ಉಡುಪಿ ಜಿಲ್ಲಾ ಕೇಂದ್ರದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ಸು ನಿಲ್ದಾಣ ಇಲ್ಲದಿರುವ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೦೧ (೯೭) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ಸು ನಿಲ್ದಾಣಗಳು ಸ್ವಂತ ಸ್ಥಳದಲ್ಲಿದ್ದರೂ ಸಹ ಉಡುಪಿ ಜಿಲ್ಲೆಯಲ್ಲಿ ಇಲ್ಲದೆ ಇರಲು ಕಾರಣವೇನು ;

(ಆ) ಉಡುಪಿ ಜಿಲ್ಲೆಯ ಜಿಲ್ಲಾ ಕೇಂದ್ರದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ಸು ನಿಲ್ದಾಣಕ್ಕೆ ಸ್ಥಳ ಕಾಯ್ದಿರಿಸಲಾಗಿದೆಯೇ ; ಅಂದಾಜು ಪಟ್ಟಿ ತಯಾರಿಸಲಾಗಿದೆಯೇ; ನಕ್ಷೆ (Plan) ತಯಾರಿಸಲಾಗಿದೆಯೇ; ಅಂದಾಜು ಪಟ್ಟಿ ಹಾಗೂ ಯೋಜನೆ ತಯಾರಾಗದಿದ್ದಲ್ಲಿ ಕಾರಣವೇನು ?

## ರಾಜ್ಯದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಜನ ಸಾಮಾನ್ಯರಿಗೆ ಸಿಗುವ ಸೌಲಭ್ಯಗಳಲ್ಲಿ ಪ್ರಚಾರದ ಕೊರತೆ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೦೨ (೯೭೧) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಜನ ಸಾಮಾನ್ಯರಿಗೆ ಸಿಗುವ ಸೌಲಭ್ಯಗಳ ಪ್ರಚಾರದ ಬಗ್ಗೆ ಕೊರತೆ ಇರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇಲಾಖೆ ತೆಗೆದುಕೊಂಡಿರುವ ಕ್ರಮಗಳೇನು ;

(ಆ) ರಾಜ್ಯದ ತಾಲ್ಲೂಕು ಕೇಂದ್ರಗಳು ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಸಿಗುವ ಸೌಲಭ್ಯಗಳ ಬಗ್ಗೆ ಶಾಲಾ, ಕಾಲೇಜು, ಗ್ರಾಮ ಪಂಚಾಯಿತಿ

ಕಛೇರಿ, ಸಹಕಾರಿ ಸಂಘಗಳ ಮುಖಾಂತರ ಪ್ರಚಾರ ಮಾಡುವ ಅವಶ್ಯಕತೆಗಳನ್ನು ಇಲಾಖೆ ಮನಗೊಂಡಿದೆಯೇ ; ಇಲ್ಲವಾದಲ್ಲಿ, ಪೂರ್ಣ ಪ್ರಮಾಣದ ಪ್ರಚಾರದ ಕೊರತೆಯಿಂದ ಜನಸಾಮಾನ್ಯರು ಸೌಲಭ್ಯಗಳಿಂದ ವಂಚಿತರಾಗುವುದಿಲ್ಲವೇ ?

## ಅರಣ್ಯ ಪ್ರದೇಶದ ಬಡಜನರಿಗೆ ಅಡುಗೆ ಅನಿಲ ನೀಡುವ ಕುರಿತು

**ಶ್ರೀ ಎಂ.ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೬೦೩ (೧೦೦೫) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಅರಣ್ಯ ಪ್ರದೇಶದಲ್ಲಿ ವಾಸವಾಗಿರುವ ಬಡ ಜನರಿಗೆ "ಅಡುಗೆ ಅನಿಲ" (ಗ್ಯಾಸ್ ಸಿಲೆಂಡರ್) ವಿತರಿಸಲಾಗುತ್ತಿದೆಯೇ ;

(ಆ) ೨೦೧೪–೧೫ ಮತ್ತು ೨೦೧೫–೧೬ನೇ ಸಾಲಿನಲ್ಲಿ ರಾಜ್ಯದ ಎಷ್ಟು ಪರಿಶಿಷ್ಠ ಪಂಗಡ ಮತ್ತು ಪರಿಶಿಷ್ಠ ಜಾತಿ ಕುಟುಂಬಗಳಿಗೆ ಈ ಯೋಜನೆಯಡಿ ಅನುಕೂಲ ಮಾಡಿಕೊಡಲಾಗಿದೆ ;

(ಇ) ಬಿ.ಪಿ.ಎಲ್. ಕಾರ್ಡು ಹೊಂದಿರುವ ಸಾರ್ವಜನಿಕರಿಗೆ ಈ ಯೋಜನೆಯಲ್ಲಿ ಅನುಕೂಲ ಮಾಡಿಕೊಡಲಾಗುತ್ತಿದೆ ; ಇಲ್ಲವಾದ್ದಲ್ಲಿ, ಮುಂದಿನ ದಿನಗಳಲ್ಲಿ ಅನುಕೂಲ ಮಾಡಿಕೊಡುವ ವಿಚಾರ ಸರ್ಕಾರದ ಮುಂದೆ ಇದೆಯೇ ;

(ಈ) ಚಿಕ್ಕಮಗಳೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಅರಣ್ಯ ಪ್ರದೇಶದ ಎಷ್ಟು ಕುಟುಂಬಗಳಿಗೆ ಈ ಯೋಜನೆಯಡಿ ಅನುಕೂಲ ಮಾಡಿಕೊಡಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಉ) ಈ ಯೋಜನೆಯಡಿ ಹೆಚ್ಚುವರಿಯಾಗಿ ಅಡುಗೆ ಅನಿಲ ವಿತರಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ ; ಈ ಯೋಜನೆಯ ಅನುಕೂಲ ಪಡೆದುಕೊಳ್ಳಲು ಇರುವ ಮಾನದಂಡನೆಗಳೇನು ?

## ಖಾಸಗಿ ಆಸ್ಪತ್ರೆಗಳ, ನರ್ಸಿಂಗ್ ಹೋಂಗಳ ನಿಯಂತ್ರಣಕ್ಕೆ ಸರ್ಕಾರದ ಕ್ರಮಗಳ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೯೦೪ (೯೮೩) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಖಾಸಗಿ ಆಸ್ಪತ್ರೆಗಳು, ನರ್ಸಿಂಗ್ ಹೋಂಗಳ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಇಲ್ಲದಿದ್ದಲ್ಲಿ, ಕಾರಣಗಳೇನು ;

(ಆ) ಸದರಿ ಆಸ್ಪತ್ರೆಗಳು ರೋಗಿಗಳಿಂದ ಹೆಚ್ಚು ವೈದ್ಯೋಪಚಾರ ಶುಲ್ಕ ವಸೂಲಿ ಮಾಡಬಹುದೆ ;

(ಇ) ಈ ಆಸ್ಪತ್ರೆಗಳ ಚಿಕಿತ್ಸಾ ನಿಯಂತ್ರಣಕ್ಕೆ ಒಂದು ಸಮರ್ಪಕ ನೀತಿ ನಿರೂಪಣೆ ರೂಪಿಸಲು ಸರ್ಕಾರಕ್ಕಿರುವ ತೊಂದರೆಗಳೇನು ;

(ಈ) ಆಸ್ಪತ್ರೆಗಳು ಅಗತ್ಯವಿಲ್ಲದಿರುವ ಶುಲ್ಕವನ್ನು ಪಾವತಿಸುವಂತೆ ಹಾಗೂ ರೋಗಿ ಏನಾದರೂ ಮರಣ ಹೊಂದಿದ್ದರು ಕೂಡ ಐಸಿಯು, ವೆಂಟಿಲೇಟರ್ ಎಂದು ಕೃತಕ ಉಸಿರಾಟ ಕಲ್ಪಿಸಿ ರೋಗಿಗಳ ಪೋಷಕರಿಂದ ಹಣ ವಸೂಲಿ ಮಾಡುವ ಬಗ್ಗೆ ಸರ್ಕಾರ ಏನು ಕ್ರಮಕೈಗೊಂಡಿದೆ ;

(ಉ) ಅದೇ ರೀತಿ ನಿಧನ ಹೊಂದಿದವರ ಶುಲ್ಕವನ್ನು ಪೂರ್ಣ ಪಾವತಿ ಮಾಡಿದ ನಂತರವೇ ಮೃತದೇಹವನ್ನು ನೀಡುವ ಷಡ್ಯಂತ್ರದ ಕುರಿತು ಸರ್ಕಾರದ ಅಭಿಪ್ರಾಯವೇನು ? (ವಿವರ ಒದಗಿಸುವುದು)

## ವಿವಿಧ ಇಲಾಖೆಗಳಲ್ಲಿ ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ ವರ್ಗಕ್ಕೆ ಕಾಮಗಾರಿಗಳು ಮೀಸಲಿರಿಸಿದ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೯೦೫ (೯೮೪) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವಿವಿಧ ಇಲಾಖೆಗಳ ಹಲವಾರು ಕಾಮಗಾರಿಗಳ ಪೈಕಿ ಎಷ್ಟು ಕಾಮಗಾರಿಗಳನ್ನು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ ವರ್ಗಕ್ಕೆ ಮೀಸಲಿರಿಸಲಾಗಿದೆ ;

(ಆ) ಕಾಮಗಾರಿ ಮೀಸಲು ನೀತಿಗೆ ಅನುಸರಿಸುವ ಮಾನದಂಡಗಳೇನು ; ಯಾವ ಯಾವ ಇಲಾಖೆಯ ಯಾವ ಯಾವ ಮತ್ತು ಎಷ್ಟು ಕಾಮಗಾರಿಗಳನ್ನು ಆ ವರ್ಗಕ್ಕೆ ನೀಡಲಾಗಿದೆ ; (ಕಾಮಗಾರಿವಾರು, ಮೊತ್ತವಾರು, ಜಿಲ್ಲಾವಾರು, ಮಹಾನಗರದಲ್ಲಾದರೆ ವಾರ್ಡ್‌ವಾರು ಮಾಹಿತಿ ನೀಡುವುದು)

(ಇ) ಇದುವರೆಗೂ ಇಂತಹ ಕಾಮಗಾರಿಗಳನ್ನು ಈ ವರ್ಗಕ್ಕೆ ಮೀಸಲು ನೀಡದಿದ್ದಲ್ಲಿ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು ;

(ಈ) ಸದರಿ ಕಾಮಗಾರಿ ಗುತ್ತಿಗೆ ನೀಡುವಲ್ಲಿ ಪಾರದರ್ಶಕ ನಿಯಮಗಳನ್ನು ಅಳವಡಿಸಿಕೊಳ್ಳಲಾಗಿದೆಯೇ ? (ವಿವರ ಒದಗಿಸುವುದು)

## ರಾಜ್ಯದಲ್ಲಿ ಮಾಸಾಶನ ನೀಡಲಾಗುತ್ತಿರುವ ಕಲಾವಿದರ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೯೦೬ (೯೮೫) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೪–೧೫ ಮತ್ತು ೨೦೧೫–೧೬ನೇ ಸಾಲಿನಲ್ಲಿ ಎಷ್ಟು ಜನ ಕಲಾವಿದರಿಗೆ ಮಾಸಾಶನವನ್ನು ನೀಡಲಾಗಿದೆ ; (ವಿವರ ನೀಡುವುದು)

(ಆ) ಮಾಸಾಶನ ಪಡೆಯಲು ಕಲಾವಿದರನ್ನು ಗುರುತಿಸುವ ಮಾನದಂಡಗಳೇನು ;

(ಇ) ಪ್ರತಿ ತಿಂಗಳೂ ನಿಗಧಿತ ದಿನಾಂಕದೊಳಗಾಗಿ ಮಾಸಾಶನವನ್ನು ನೀಡಲಾಗುತ್ತಿದೆಯೇ ;

(ಈ) ಹಾಗಿದ್ದಲ್ಲಿ, ಫಲಾನುಭವಿಗಳಿಗೆ ಮಾಸಾಶನವು ಸರಿಯಾಗಿ ನಿಗಧಿತ ಅವಧಿಯಲ್ಲಿ ತಲುಪದಿರಲು ಕಾರಣಗಳೇನು ?

## ಗಡಿ ಪ್ರಾಧಿಕಾರದ ವತಿಯಿಂದ ಎಷ್ಟು ಸಂಸ್ಥೆಗಳಿಗೆ ಧನಸಹಾಯ ಮಾಡಲಾಗಿದೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೯೦೭ (೯೮೧) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ೨೦೧೪-೧೫ನೇ ಮತ್ತು ೨೦೧೬ನೇ ಸಾಲಿನಲ್ಲಿ ಎಷ್ಟು ಸಂಸ್ಥೆಗಳಿಗೆ ಧನಸಹಾಯ ಒದಗಿಸಲಾಗಿದೆ ; (ಗಡಿ, ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಪ್ರಾಧಿಕಾರದ ವತಿಯಿಂದ ಧನಸಹಾಯ ಪಡೆಯಲು ಎಷ್ಟು ಸಂಸ್ಥೆಗಳು ಅರ್ಜಿ ಸಲ್ಲಿಸಿವೆ ; ಅರ್ಜಿ ಸಲ್ಲಿಸಿದ ಸಂಸ್ಥೆಗಳಲ್ಲಿ ಎಷ್ಟು ಸಂಸ್ಥೆಗಳಿಗೆ, ಎಷ್ಟೆಷ್ಟು ಮೊತ್ತದ ಧನಸಹಾಯ ನೀಡಲಾಗಿದೆ ; (ಗಡಿ, ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಪ್ರಾಧಿಕಾರದಿಂದ ಸಂಘ-ಸಂಸ್ಥೆಗಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಅನುದಾನ ಮಂಜೂರು ಮಾಡಿರುವ ಪ್ರಕರಣಗಳಲ್ಲಿ ಸಂಸ್ಥೆಯ ಹೆಸರಿನಲ್ಲಿ ಖಾತೆಗೆ ಅನುದಾನ ಬಿಡುಗಡೆ ಮಾಡದೇ ಕೆಲವು ಖಾಸಗಿ ವ್ಯಕ್ತಿಗಳ ಖಾತೆಗಳಿಗೆ ಅನುದಾನ ಮಂಜೂರು ಮಾಡಿರುವ ಬಗ್ಗೆ ದೂರುಗಳು ಇರುವುದು ನಿಜವೇ ; ಈ ಬಗ್ಗೆ ಸರ್ಕಾರವು ತನಿಖೆ ನಡೆಸಿದೆಯೇ ; ಇಲ್ಲವಾದಲ್ಲಿ, ಕಾರಣವೇನು ;

(ಈ) ಪ್ರಾಧಿಕಾರದಲ್ಲಿ ನಡೆಯುತ್ತಿರುವ ಈ ಎಲ್ಲಾ ಅವ್ಯವಹಾರಗಳ ಬಗ್ಗೆ ಇಲಾಖೆಯ ಅಧಿಕಾರಿಗಳು ಕಡತ ಸಂಖ್ಯೆ : ಕ.ಸಂ.ವಾ. ೮೭ ಕೆ.ಒ.ಎಲ್ ೨೦೧೪ರ ಮೂಲಕ ಸರ್ಕಾರದ ಗಮನಕ್ಕೆ ತಂದಿದ್ದರೂ ಈ ಬಗ್ಗೆ ತನಿಖೆ ನಡೆಸದಿರಲು ಕಾರಣವೇನು ; ತಪ್ಪೆಸಗಿದ ಅಧಿಕಾರಿಗಳನ್ನು ಇದುವರೆಗೂ ಪ್ರಾಧಿಕಾರದಲ್ಲೇ ಮುಂದುವರೆಸಿರುವುದು ನಿಜವೇ ; ಹೌದಾದಲ್ಲಿ, ಹಾಗೆ ಮುಂದುವರೆಸಲು ಕಾರಣವೇನು ;

(ಉ) ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು ಸ್ಥಾಪನೆಯಾದಾಗಿನಿಂದ ಇಲ್ಲಿಯವರೆಗೂ ಪ್ರಾಧಿಕಾರದ ಲೆಕ್ಕಪತ್ರಗಳ ಆಡಿಟ್ ನಡೆಯದಿರುವ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮವೇನು ; ಇದರ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು ?

## ಔಷಧಿಗಳ ನಿಷೇಧದ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೯೦೮ (೧೦೬೩) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

ಇತ್ತೀಚೆಗೆ, ಮೆಡಿಕಲ್ ಸ್ಟೋರ್‌ಗಳಲ್ಲಿ ಲಭ್ಯವಿರುವ ಸುಮಾರು ೩೪೪ ಅಲೋಪತಿಕ್ ಔಷಧಿಗಳಿಗೆ ನಿಷೇಧ ಹೇರಿರುವುದು ನಿಜವೇ ; ನಿಜವಾಗಿದ್ದಲ್ಲಿ, ಅವುಗಳ ಕುರಿತು ಮಾಹಿತಿ ನೀಡುವುದು ?

## ಅಂಗನವಾಡಿ ಕೇಂದ್ರಗಳ ಕಾರ್ಯಚಟುವಟಿಕೆಗಳ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೯೦೯ (೧೦೩೧) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿನ ಅಂಗನವಾಡಿ ಕೇಂದ್ರಗಳ ಕಾರ್ಯ ಚಟುವಟಿಕೆಗಳು ಯಾವುವು ; (ಸಂಕ್ಷಿಪ್ತವಾಗಿ ವಿವರ ನೀಡುವುದು)

(ಆ) ರಾಜ್ಯದಲ್ಲಿ ೨೦೧೩ ರಿಂದ ಶಾಲೆಗಳ ಹೊರಗೆ, ಶಾಲಾ ಆವರಣಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು ;

(ಇ) ಅವುಗಳಲ್ಲಿ ಇಲ್ಲಿಯವರೆವಿಗೆ ಎಷ್ಟು ಅಂಗನವಾಡಿ ಕೇಂದ್ರಗಳಿಗೆ ಕಟ್ಟಡ ಕಲ್ಪಿಸಿಕೊಡಲಾಗಿದೆ ; ಪ್ರಸ್ತುತ ಶಾಲಾ ಆವರಣಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು;

(ಈ) ಪ್ರಸ್ತುತ ಶಾಲಾ ಆವರಣಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳು ಮಳೆಗಾಲದಲ್ಲಿ ಮತ್ತು ಬೇಸಿಗೆ ಹೆಚ್ಚಿರುವ ಕಾಲದಲ್ಲಿ ಹೇಗೆ ಕಾರ್ಯನಿರ್ವಹಿಸುತ್ತವೆ ?

## ಅಂಗನವಾಡಿ ಕಾರ್ಯಕರ್ತೆಯರ ವೇತನ ಪರಿಷ್ಕರಣೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೯೧೦ (೧೧೯೬) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಅಂಗನವಾಡಿ ಕೇಂದ್ರಗಳ ಕೆಲಸದ ಅವಧಿಯನ್ನು ವಿಸ್ತರಿಸಲಾಗಿದೆಯೇ ; ವಿಸ್ತರಿಸಲಾಗಿದ್ದಲ್ಲಿ, ಯಾವಾಗ ವಿಸ್ತರಿಸಲಾಯಿತು ; (ವಿಸ್ತರಿಸಲು ಕಾರಣವೇನು)

(ಆ) ವಿಸ್ತರಿಸುವ ಮೊದಲು ಮಾಡುತ್ತಿದ್ದ ಕೆಲಸ ಮತ್ತು ಅವಧಿಗೂ ವಿಸ್ತರಿಸಿದ ನಂತರ ಮಾಡುತ್ತಿರುವ ಕೆಲಸ ಮತ್ತು ಅವಧಿಗೂ ಇರುವ ವ್ಯತ್ಯಾಸಗಳೇನು ;

(ಇ) ಕೆಲಸದ ಅವಧಿ ವಿಸ್ತರಣೆಯಾಗಿರುವ ಕಾರಣದಿಂದ ಅಂಗನವಾಡಿ ಕಾರ್ಯಕರ್ತೆಯರ ವೇತನ ಪರಿಷ್ಕರಣೆ ಮಾಡಲಾಗಿದೆಯೇ ; ಇಲ್ಲವಾದಲ್ಲಿ, ಕಾರಣವೇನು ;

(ಈ) ಹೆಚ್ಚುವರಿ ಅವಧಿ ಕೆಲಸ ಮಾಡುತ್ತಿರುವ ಇವರುಗಳ ವೇತನ ಹೆಚ್ಚಿಸುವಲ್ಲಿ ಸರ್ಕಾರದ ನಿಲುವೇನು ?

## ವೆಂಕಟಪ್ಪ ಆರ್ಟ್ ಗ್ಯಾಲರಿ ನಿರ್ವಹಣೆ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೯೧೧ (೧೦೩೭) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಅತ್ಯಂತ ಪ್ರತಿಷ್ಠಿತ ವೆಂಕಟಪ್ಪ ಆರ್ಟ್ ಗ್ಯಾಲರಿಯ ನಿರ್ವಹಣೆಯನ್ನು ಖಾಸಗಿಯವರಿಗೆ ನೀಡಿರುವುದು ನಿಜವೇ ; ನಿಜವಾಗಿದ್ದಲ್ಲಿ, ಕಾರಣವೇನು ; ಯಾವ ರೀತಿಯ ಪ್ರಮುಖ ನಿಬಂಧನೆ ಮತ್ತು ನಿಯಮಗಳನ್ನು ರೂಪಿಸಲಾಗಿದೆ ;

(ಆ) ಈ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಹೆಸರಿಸಬಹುದಾದ ಅತ್ಯಂತ ಅಪೂರ್ವ ಮತ್ತು ಪುರಾತನ ಕಲಾಕೃತಿಗಳ ಕುರಿತು ಸಂಕ್ಷಿಪ್ತವಾದ ವಿವರ ನೀಡುವುದು ;

(ಇ) ಖಾಸಗಿಯವರಿಗೆ ವಹಿಸಿದ ಮೇಲೆ ಸದರಿ ಅಪೂರ್ವ ಕಲಾಕೃತಿಗಳ ಭದ್ರತೆ ಕಾಪಾಡುವಲ್ಲಿ ಲೋಪವಾಗುವುದಿಲ್ಲವೇ ; ಲೋಪವಾದಲ್ಲಿ ಅಥವಾ ಕಲಾಕೃತಿಗಳು ಹಾನಿಯಾದಲ್ಲಿ ಅದಕ್ಕೆ ಜವಾಬ್ದಾರಿ ಯಾರು ಮತ್ತು ಪರಿಹಾರವೇನು ;

(ಈ) ಈ ಹಿಂದೆ ಹೊಸ ಕಲಾವಿದರಿಗೆ ಕಲಾಕೃತಿಗಳ ಪ್ರದರ್ಶನಕ್ಕೆ ನೀಡುತ್ತಿದ್ದ ಬಾಡಿಗೆ ದರವೇನು ;

(ಉ) ಖಾಸಗಿಯವರಿಗೆ ನೀಡಿದ ನಂತರದ ಬಾಡಿಗೆ ದರವೇನು ; ಈ ಸಂಬಂಧ ಯಾವ ರೀತಿ ನಿಯಮವಿರುತ್ತದೆ ;

(ಊ) ಬಡ ಕಲಾವಿದರಿಗೆ ತಮ್ಮ ಕಲಾಕೃತಿ ಪ್ರದರ್ಶಿಸಲು ಹೆಚ್ಚುವರಿ ಬಾಡಿಗೆ ಹೊರೆಯಾಗುವುದಲ್ಲವೇ ; ಈ ಸಮಸ್ಯೆಗೆ ಪರಿಹಾರವೇನು ?

## "ಅನ್ನಭಾಗ್ಯ" ಯೋಜನೆಯಡಿ ಪ್ಲಾಸ್ಟಿಕ್ ಅಕ್ಕಿ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೯೧೨ (೧೦೨೪) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರದ "ಅನ್ನಭಾಗ್ಯ" ಯೋಜನೆಯಡಿ ಪ್ಲಾಸ್ಟಿಕ್ ಅಕ್ಕಿ ನೀಡಿರುವುದು ನಿಜವೇ ; (ಪ್ರಕರಣದ ಸಂಪೂರ್ಣ ವಿವರ ನೀಡುವುದು)

(ಆ) ಈ ಬಗ್ಗೆ ಅಕ್ಕಿಯನ್ನು ಪ್ರಯೋಗ ಶಾಲೆಯಲ್ಲಿ ಪರೀಕ್ಷಿಸಲಾಗಿದೆಯೇ ; (ವಿವರ ಮತ್ತು ಫಲಿತಾಂಶ ಒದಗಿಸುವುದು)

(ಇ) ಕಳೆದ 2 ವರ್ಷಗಳಲ್ಲಿ ದಾಖಲಾದ ಕಳಪೆ ಗುಣಮಟ್ಟದ ಅಕ್ಕಿ ವಿತರಣೆ ಮತ್ತು "ಅನ್ನಭಾಗ್ಯ" ಯೋಜನೆಯಡಿ ಅವ್ಯವಹಾರದ ಪ್ರಕರಣಗಳೆಷ್ಟು ; ಈ ಬಗ್ಗೆ ಕೈಗೊಂಡ ಕ್ರಮಗಳೇನು ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಈ) "ಅನ್ನಭಾಗ್ಯ" ಯೋಜನೆಯು ಕಳಪೆ ಗುಣಮಟ್ಟ ಮತ್ತು ಅವ್ಯವಹಾರಗಳಿಂದ "ಕನ್ನಭಾಗ್ಯ" ಎಂದು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿರುವುದು ನಿಜವೇ ;

(ಉ) "ಅನ್ನಭಾಗ್ಯ" ಯೋಜನೆಯನ್ನು ಪಾರದರ್ಶಕವಾಗಿ ಅನುಷ್ಠಾನಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಕೇಂದ್ರ ಸರ್ಕಾರ ನಿಷೇಧಿಸಿರುವ ಔಷಧಗಳ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೯೧೩ (೧೦೨೩) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಇತ್ತೀಚೆಗೆ ಕೇಂದ್ರ ಸರ್ಕಾರ ನಿಷೇಧಿಸಿರುವ ಔಷಧಗಳಾವುವು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ನಿಷೇಧಿತ ಔಷಧಿಗಳನ್ನು ಮಾರುಕಟ್ಟೆಯಿಂದ ತೆರವುಗೊಳಿಸುವ ಬಗ್ಗೆ ಮತ್ತು ಸಾರ್ವಜನಿಕರಿಗೆ ಅರಿವು ಮೂಡಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಇ) ವೈದ್ಯರ ಚೀಟಿಯಿಲ್ಲದೆ ಔಷಧ ಮಳಿಗೆಯಲ್ಲಿ ಔಷಧ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ನಿಷೇಧಿತ ಔಷಧಿಗಳು, ವೈದ್ಯರ ಚೀಟಿಯಿಲ್ಲದೆ ಔಷಧಿಗಳ ಮಾರಾಟ, ವೈದ್ಯರು ಔಷಧಿ ಚೀಟಿಯಲ್ಲಿ ಸ್ಪಷ್ಟವಾಗಿ ಔಷಧಿಗಳನ್ನು ನಮೂದಿಸಿರುವುದನ್ನು ಕಡ್ಡಾಯಗೊಳಿಸುವುದರ ಬಗ್ಗೆ ಸರ್ಕಾರ ಯಾವ ಕ್ರಮಕೈಗೊಳ್ಳಲಿದೆ ?

## ರಾಜ್ಯದಲ್ಲಿ ಮಕ್ಕಳು ಅಪೌಷ್ಠಿಕತೆಯಿಂದ ಬಳಲುತ್ತಿರುವ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೯೧೪ (೧೦೨೨) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಮಕ್ಕಳು ಅಪೌಷ್ಠಿಕತೆಯಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಅಪೌಷ್ಠಿಕತೆಯನ್ನು ಹೋಗಲಾಡಿಸಲು ಸರ್ಕಾರ ಹಾಕಿಕೊಂಡಿರುವ ಯೋಜನೆಗಳಾವುವು ;

(ಇ) ಹಾವೇರಿ ಜಿಲ್ಲೆಯಲ್ಲಿ ೨೦೧೩–೧೪ ರಿಂದ ಪ್ರಸತ್ತ ಸಾಲಿನವರೆಗೂ ಅಪೌಷ್ಠಿಕತೆಯಿಂದ ಬಳಲುತ್ತಿರುವ ಎಷ್ಟು ಮಕ್ಕಳನ್ನು ಪತ್ತೆ ಮಾಡಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಈ) ಸದರಿ ಅಪೌಷ್ಠಿಕ ಮಕ್ಕಳ ಆರೋಗ್ಯ ಚೇತರಿಕೆಗೆ ಇಲಾಖೆಯಿಂದ ಕೈಗೊಂಡ ಕ್ರಮಗಳೇನು ;

(ಉ) ಸದ್ಯದ ಪ್ರಗತಿಯಿಂದ ವರದಿ ಪ್ರಕಾರ ಎಷ್ಟು ಚೇತರಿಕೆಯನ್ನು ಕಂಡಿವೆ; ಇದಕ್ಕಾಗಿ ಇಲ್ಲಿಯವರೆಗೆ ವ್ಯಯಿಸಲಾದ ಅನುದಾನ ಎಷ್ಟು ? (ಸಂಪೂರ್ಣ ಮಾಹಿತಿ ಒದಗಿಸುವುದು)

## ಆಹಾರ ಸುರಕ್ಷತಾ ಕಾಯ್ದೆ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೯೧೫ (೧೦೨೫) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಆಹಾರ ಸುರಕ್ಷತಾ ಕಾಯ್ದೆ ಹೆಸರಿನಲ್ಲಿ ಅಕ್ರಮ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಳೆದ ೩ ವರ್ಷಗಳಲ್ಲಿ ಎಷ್ಟು ಆಹಾರ ಮಾದರಿಗಳನ್ನು ಪ್ರಯೋಗಾಲಯಗಳಲ್ಲಿ ಪರೀಕ್ಷೆಗೆ ಒಳಪಡಿಸಲಾಗಿದೆ ; ಈ ಪ್ರಕರಣಗಳಲ್ಲಿ ಯಾರು ಯಾರು ಭಾಗಿಯಾಗಿರುತ್ತಾರೆ ;

(ಇ) ಅನರ್ಹ ಆಹಾರ ಪದಾರ್ಥ ಸಾಬೀತಾದ ಪ್ರಕರಣಗಳಲ್ಲಿ ಕ್ರಮಕೈಗೊಂಡಿರುವ ಪ್ರಕರಣಗಳೇಷ್ಟು ; ಎಲ್ಲಾ ಪ್ರಕರಣಗಳಲ್ಲಿ ಯಾವಾಗ ಕ್ರಮಕೈಗೊಳ್ಳಲಾಗುವುದು ;

(ಈ) ಗುಣಮಟ್ಟವಿಲ್ಲದ ಆಹಾರ ಪದಾರ್ಥ ಮಾರಾಟ ಮತ್ತು ಉತ್ಪಾದನೆ ನಿಯಂತ್ರಿಸದ ಅಧಿಕಾರಿಗಳ ವಿರುದ್ಧ ಯಾವ ಕ್ರಮಕೈಗೊಳ್ಳಲಾಗಿದೆ ; ಮತ್ತು ಯಾವ ಕ್ರಮಕೈಗೊಳ್ಳಲಿದೆ ? (ಸಂಪೂರ್ಣ ವಿವರ ಒದಗಿಸುವುದು)

## ಸಮುದಾಯ ಭವನ–ಅನುಷ್ಠಾನ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೯೧೬ (೧೦೦೯) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮೀನುಗಾರಿಕೆ ವೃತ್ತಿಯಲ್ಲಿ ತೊಡಗಿರುವ ಯಾವ ಯಾವ ಹೆಸರಿನ ಸಮಾಜದವರಿಗೆ ಸಮುದಾಯ ಭವನ ಕಟ್ಟಲು ಸರ್ಕಾರ ಸಹಾಯ ಧನ ನೀಡಿದೆ ; (ಹೆಸರು ಸಮೇತ ವರ್ಷವಾರು ನೀಡಿದ ಹಣದ ವಿವರ ಒದಗಿಸುವುದು) ಸಾಮಾನ್ಯವಾಗಿ ಅಂದಾಜು ವೆಚ್ಚದ ಶೇಕಡಾ ಎಷ್ಟು ಪ್ರಮಾಣ ಸರ್ಕಾರ ಧನ ಸಹಾಯ ಒದಗಿಸುತ್ತದೆ ; ಒಂದು ಸ್ಥಳದಲ್ಲಿ ಅದೇ ಸಮುದಾಯ ಭವನಕ್ಕೆ ಎಷ್ಟು ಬಾರಿ ಧನ ಸಹಾಯ ಮಾಡಲು ನಿಯಮಾವಳಿಯಲ್ಲಿ ಅವಕಾಶ ಕಲ್ಪಿಸಲಾಗಿದೆ ;

(ಆ) ಸರ್ಕಾರದಿಂದ ಧನ ಸಹಾಯ ಪಡೆದ ಸಮುದಾಯ ಭವನದ ಕಾಮಗಾರಿಯ ಮೇಲುಸ್ತುವಾರಿಯನ್ನು ನೋಡಿ ಪ್ರತಿ ಆರು ತಿಂಗಳಿಗೊಮ್ಮೆ ಸರ್ಕಾರಕ್ಕೆ ವರದಿ ನೀಡುವ ಮತ್ತು ಕಳಪೆ ಕಾಮಗಾರಿ, ಕಾಮಗಾರಿಯಲ್ಲಿ ಅವ್ಯವಹಾರ, ಮುಂತಾದವುಗಳ ಬಗ್ಗೆ ನಿಗಾ ಇಡಲು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳನ್ನು ನಿಯೋಜಿಸಲಾಗಿದೆಯೇ ;

(ಇ) ಎಷ್ಟು ಪ್ರಕರಣಗಳಲ್ಲಿ ಲೋಪಗಳು ಕಂಡು ಬಂದಿವೆ ; (ಹೆಸರು ಸಮೇತ ವಿವರ ಒದಗಿಸುವುದು)

(ಈ) ಒಂದು ಸಂಘ ಅಥವಾ ಸಂಸ್ಥೆಗೆ ಒಂದೇ ಸ್ಥಳದಲ್ಲಿ ಎರಡನೇ ಬಾರಿ ಸಮುದಾಯ ಭವನ ನಿರ್ಮಾಣದ ಉದ್ದೇಶಕ್ಕೆ ಅನುದಾನವನ್ನು ಬಿಡುಗಡೆ ಮಾಡಲಾಗಿರುವ ಸಂಘ ಸಂಸ್ಥೆಗಳ ವಿವರ ಒದಗಿಸುವುದು ಮತ್ತೆ ಕೆಲವೊಂದು ಸಂಸ್ಥೆಯವರು ಮೂರನೇ ಬಾರಿ ಸಹಾಯ ಧನ ಕೋರಿದ್ದು ಸರ್ಕಾರ ಇವರ ಬೇಡಿಕೆಯನ್ನು ಸಹಾನುಭೂತಿಯಿಂದ ವಿಶೇಷ ಪ್ರಕರಣವೆಂದು ಪರಿಗಣಿಸಿ ಧನ ಸಹಾಯ ನೀಡಲು ಮುಂದಾಗುವುದೇ ;

(ಉ) ಕೆಲವರು ಆಡಳಿತ ಮಂಡಳಿಯನ್ನು ಅವರಿಗೆ ಇಷ್ಟ ಬಂದವರನ್ನು ಪದಾಧಿಕಾರಿಗಳನ್ನಾಗಿ ೫–೬ ವರ್ಷಗಳಿಂದ ಚುನಾವಣೆಯಿಲ್ಲದೆ ದಬಾವಣೆಯಿಂದ ಪ್ರತಿವರ್ಷ ಅವಿರೋಧ ಆಯ್ಕೆಯೆಂದು ಮುಂದುವರಿಯುತ್ತ ನಿವೃತ್ತರ ನೌಕರರ ಆಶ್ರಯ ತಾಣವಾಗಿರುವುದು ಸ್ಥಳೀಯ ಅಧಿಕಾರಿಗಳ ಗಮನಕ್ಕೆ ಬಂದರೂ ಈ ಬಗ್ಗೆ ಸರ್ಕಾರಕ್ಕೆ ವರದಿ ನೀಡದಿರಲು ಕಾರಣವೇನು ?

## ಸಮಾಜ ಕಲ್ಯಾಣ ಖಾತೆಯಲ್ಲಿನ ನೌಕರರು ಮತ್ತು ಇಲಾಖೆಯ ಟೆಂಡರ್‌ಗೆ ಸಂಬಂಧಿಸಿದಂತೆ

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೧೭ (೧೦೦೧) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೩ನೇ ಜೂನ್‌ನಿಂದ ೨೦೧೫ನೇ ಡಿಸೆಂಬರ್‌ವರೆಗೆ ಬೇರೆ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಎಷ್ಟು ಜನ ನೌಕರರನ್ನು ಸಮಾಜ ಕಲ್ಯಾಣ ಮತ್ತು ಹಿಂದುಳಿದ ಕಲ್ಯಾಣ ಇಲಾಖೆ ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಗೆ ಖಾಯಂ ಆಗಿ ನಿಯೋಜನೆ ಮಾಡಿಕೊಳ್ಳಲಾಗಿದೆ ಹಾಗೂ ಇದಕ್ಕೆ ಕಾರಣವೇನು ; (ವರ್ಗವಾರು ವಿವರ ನೀಡುವುದು)

(ಆ) ೨೦೧೩ನೇ ಜೂನ್ ನಿಂದ ೨೦೧೫ನೇ ಡಿಸೆಂಬರ್ ವರೆಗೆ ಸಮಾಜ ಕಲ್ಯಾಣ ಮತ್ತು ಹಿಂದುಳಿದ ಕಲ್ಯಾಣ ಇಲಾಖೆ ನೌಕರರ (ವರ್ಗವಾರು) ವರ್ಗಾವಣೆ ಯಾವ ಪ್ರಮಾಣದಲ್ಲಿ ಮಾಡಲಾಗಿದೆ ;

(ಇ) ಒಂದೇ ಸ್ಥಳಕ್ಕೆ ೨–೩ ನೌಕರರನ್ನು ತೈನಾತಿಸಲಾಗಿದೆಯೇ ; ಇದರ ಔಚಿತ್ಯವೇನು, ಹೀಗಾಗಲು ಕಾರಣವೇನು ; ಅವರಿಗೆ ಮರು ಸ್ಥಳ ನಿಯುಕ್ತಿಗೊಳಿಸಲು ಕೈಗೊಂಡಿರುವ ಕ್ರಮಗಳೇನು ;

(ಈ) ಎಷ್ಟು ಜನ ಗುತ್ತಿಗೆ ಆಧಾರದ, ಹೊರಗುತ್ತಿಗೆ ಆಧಾರದ ನೌಕರರಿದ್ದಾರೆ ; ಕಳೆದ ೨ ವರ್ಷಗಳಿಂದ ಎಷ್ಟು ಜನರಿಗೆ ವರ್ಗಾವಣೆ ಮಾಡಲಾಗಿದೆ ; ಇದಕ್ಕೆ ಕಾರಣವೇನು ;

(ಉ) ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ಕಲ್ಯಾಣ ಇಲಾಖೆ ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ಸಂಬಂಧಿಸಿದಂತೆ ೨೦೧೩ನೇ ಜೂನ್ ನಿಂದ ೨೦೧೫ನೇ ಡಿಸೆಂಬರ್ ವರೆಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ ; ಯಾವ್ಯಾವ ಟೆಂಡರ್ ಕರೆಯಲಾಗಿದೆ; ಟೆಂಡರ್ ಕರೆಯಲು ಅನುಸರಿಸುವ ವಿಧಾನದ ಪೂರ್ಣ ಮಾಹಿತಿ ನೀಡುವುದು ?

## ಬೆಳಗಾವಿ ಜಿಲ್ಲೆ, ಬೈಲಹೊಂಗಲ ನಗರದಲ್ಲಿ ಮಹಿಳಾ ಹಾಸ್ಟಲ್ ಪ್ರಾರಂಭಿಸುವ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೯೧೮ (೧೦೮೦+೧೧೯೭) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪರಿಶಿಷ್ಠ ಜಾತಿಯವರು ಅಂತರ್ಜಾತಿ ವಿವಾಹವಾದಲ್ಲಿ ಸರ್ಕಾರ ನೀಡುವ ಪ್ರೋತ್ಸಾಹ ಧನವೆಷ್ಟು ;

(ಆ) ೨೦೧೫–೧೬ನೇ ಸಾಲಿನಲ್ಲಿ ಸರ್ಕಾರವು ನೀಡಿರುವ ಪ್ರೋತ್ಸಾಹ ಧನವೆಷ್ಟು ? (ಪುರುಷರು ಹಾಗೂ ಮಹಿಳೆಯರ ಪ್ರತ್ಯೇಕ ಜಿಲ್ಲಾವಾರು ಮಾಹಿತಿಯನ್ನು ನೀಡುವುದು)

## ಬಾಲ್ಯ ವಿವಾಹ ನಿಷೇಧ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೧೯ (೧೦೭೯) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಬಾಲ್ಯ ವಿವಾಹವನ್ನು ಸರ್ಕಾರವು ಸಂಪೂರ್ಣವಾಗಿ ನಿಷೇಧಿಸಿದೆಯೇ ; (ವಿವರ ನೀಡುವುದು)

(ಆ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಬಾಲ್ಯ ವಿವಾಹ ಕಾಯ್ದೆಯಡಿ ಪತ್ತೆಯಾದ, ಎಷ್ಟು ಪ್ರಕರಣಗಳು ದಾಖಲಾಗಿವೆ ; (ಜಿಲ್ಲಾವಾರು ವಿವರ ನೀಡುವುದು)

(ಇ) ರಾಜ್ಯದಲ್ಲಿ ಸಂಪೂರ್ಣವಾಗಿ ಬಾಲ್ಯ ವಿವಾಹವನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರವು ಯಾವ ಕ್ರಮ ಕೈಗೊಂಡಿದೆ ? (ವಿವರ ನೀಡುವುದು)

## ಗದಗ ಜಿಲ್ಲಾ ನೂತನ ಆಸ್ಪತ್ರೆಯಲ್ಲಿ ಮಾರ್ಚರಿ ಹಾಗೂ ಅಟಾಪ್ಸಿ ಕೊಠಡಿ ನಿರ್ಮಿಸುವ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರು (ಪದವೀಧರರ ಕ್ಷೇತ್ರ) :–**

೯೨೦ (೧೦೮೭) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗದಗ ಜಿಲ್ಲಾ ನೂತನ ಜಿಲ್ಲಾ ಆಸ್ಪತ್ರೆಗೆ ಶವಾಗಾರ (ಮಾರ್ಚರಿ) ಮತ್ತು ಶವ ವಿಚ್ಛೇದನ (ಅಟಾಪ್ಸಿ) ಕೊಠಡಿಗಳನ್ನು ಒದಗಿಸಲಾಗಿದೆಯೇ ;

(ಆ) ಈ ಸೌಲಭ್ಯ ಒದಗಿಸದಿದ್ದಲ್ಲಿ, ನೂತನವಾಗಿ ಈ ಕೊಠಡಿಗಳನ್ನು ನಿರ್ಮಿಸಲು ಕೈಗೊಂಡಿರುವ ಕ್ರಮಗಳೇನು ?

## ಗದಗ ನಗರದ ಹಳೆ ಬಸ್ ಸ್ಟ್ಯಾಂಡಿನಲ್ಲಿ ಸುಸಜ್ಜಿತ ಹೊಸ ಕಟ್ಟಡ ನಿರ್ಮಾಣಿಸುವ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರು (ಪದವೀಧರರ ಕ್ಷೇತ್ರ) :–**

೯೨೧ (೧೦೮೬) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗದಗ ನಗರದ ಹಳೆ ಬಸ್ ನಿಲ್ದಾಣದಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯದ ರೂ. ೫ ಕೋಟಿ ಆರ್ಥಿಕ ಸಹಾಯದೊಂದಿಗೆ ಸುಸಜ್ಜಿತ ಹೊಸ ಕಟ್ಟಡ ನಿರ್ಮಾಣ ಮಾಡುವ ನಿರ್ಧಾರ ಸರ್ಕಾರ ಕೈಗೊಂಡಿರುವುದು ನಿಜವೇ ; ಈ ಯೋಜನೆ ಜಾರಿಗೊಳಿಸಲು ಸರ್ಕಾರ ಅನುದಾನ ಬಿಡುಗಡೆ ಮಾಡಿದೆಯೇ ;

(ಆ) ಹಳೆ ಬಸ್ ನಿಲ್ದಾಣದಲ್ಲಿ ಸುಸಜ್ಜಿತ ಹೊಸ ಕಟ್ಟಡ ನಿರ್ಮಾಣ ಮಾಡುವ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು ?

## ಹೊಸ ಜಿಲ್ಲಾ ವಿಜ್ಞಾನ ಕೇಂದ್ರ ಸ್ಥಾಪನೆ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರು (ಪದವೀಧರರ ಕ್ಷೇತ್ರ) :–**

೯೨೨ (೧೦೮೮) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ಜಿಲ್ಲೆಗಳಲ್ಲಿ ಜಿಲ್ಲಾ ವಿಜ್ಞಾನ ಕೇಂದ್ರಗಳು ಸ್ಥಾಪನೆಯಾಗಿರುವುದಿಲ್ಲ ; (ವಿವರ ನೀಡುವುದು)

(ಆ) ೨೦೧೬–೧೭ನೇ ಆಯವ್ಯಯದಲ್ಲಿ ಹೊಸ ಜಿಲ್ಲಾ ವಿಜ್ಞಾನ ಕೇಂದ್ರ ಸ್ಥಾಪಿಸಲು ಮಂಜೂರಾತಿ ನೀಡಲಾಗುವುದೆ ;

(ಇ) ಹೊಸ ಜಿಲ್ಲಾ ವಿಜ್ಞಾನ ಕೇಂದ್ರ ಮಂಜೂರು ಮಾಡುವಲ್ಲಿ ಯಾವ ನಿಯಮಾವಳಿಗಳನ್ನು ಅನುಸರಿಸಲಾಗುತ್ತಿದೆ ; (ಮಾಹಿತಿ ಒದಗಿಸುವುದು)

(ಈ) ಗದಗ ಜಿಲ್ಲೆಯಿಂದ ೩–೪ ಬಾರಿ ವಿಜ್ಞಾನ ಕೇಂದ್ರ ಸ್ಥಾಪನೆಗಾಗಿ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಿದ್ದರೂ ಮಂಜೂರು ಮಾಡದಿರುವುದಕ್ಕೆ ಕಾರಣವೇನು ;

(ಉ) ಹಾವೇರಿ ಜಿಲ್ಲೆಗೆ, ಜಿಲ್ಲಾ ವಿಜ್ಞಾನ ಕೇಂದ್ರ ಸ್ಥಾಪಿಸಲು ಕಟ್ಟಡಕ್ಕಾಗಿ ಅನುದಾನ ಬಿಡುಗಡೆಯಾಗಿದ್ದು, ಕಟ್ಟಡದ ಶಂಕುಸ್ಥಾಪನೆ ಯಾವಾಗ ಮಾಡಲಾಗುವುದು ?

## ನಿವೃತ್ತ ಸರ್ಕಾರಿ ನೌಕರರ ಹಾಗೂ ಹಿರಿಯ ನಾಗರಿಕರ ಬೇಡಿಕೆಗಳ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರು (ಪದವೀಧರರ ಕ್ಷೇತ್ರ) :–**

೯೨೩ (೧೮೯೫) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:–

ಹಿರಿಯ ನಾಗರಿಕರಿಗೆ ಸಂಧ್ಯಾ ಸುರಕ್ಷಾ ಯೋಜನೆ ಅಡಿಯಲ್ಲಿ ಹಾಲಿ ನೀಡುತ್ತಿರುವ ವೃದ್ಯಾಪ್ಯ ವೇತನ ರೂ. ೫೦೦/– ನ್ನು ಹೆಚ್ಚಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ ?

## ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳಲ್ಲಿನ ಕೊರತೆಗಳ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೨೪ (೯೭೫) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಇಲಾಖೆಯ ಅಡಿಯಲ್ಲಿ ಕೊಡಗು ಜಿಲ್ಲೆ ವ್ಯಾಪ್ತಿಯಲ್ಲಿರುವ ಹಾಸ್ಟೆಲ್‌ಗಳ ಸಂಖ್ಯೆ ಹಾಗೂ ಇಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; (ಮಾಹಿತಿ ಒದಗಿಸುವುದು)

(ಆ) ಕಳೆದ ಮೂರು ವರ್ಷಗಳಲ್ಲಿ ಈ ಹಾಸ್ಟೆಲ್‌ಗಳಿಗೆ ಖರ್ಚು ಮಾಡಲಾದ ಹಣ ಎಷ್ಟು ; (ಮಾಹಿತಿ ಒದಗಿಸುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ಈ ಹಾಸ್ಟೆಲ್‌ಗಳಲ್ಲಿ ನಡೆಸಿದ ಕಾಮಗಾರಿ ಮತ್ತು ಖರೀದಿಸಿದ ಸಾಮಾಗ್ರಿಗಳು ಎಷ್ಟು ? (ಪ್ರತ್ಯೇಕ ಹಾಸ್ಟಲ್‌ವಾರು ವಿವರ ನೀಡುವುದು)

## ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಬಸ್ಸುಗಳ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೨೫ (೧೦೬೯) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿರುವ ಒಟ್ಟು ಬಸ್ಸುಗಳ ಸಂಖ್ಯೆ ಎಷ್ಟು ; ಪ್ರತಿನಿತ್ಯ ಕಾರ್ಯಾಚರಣೆ ಮಾಡುವ ಮಾರ್ಗಗಳ ಸಂಖ್ಯೆ ಎಷ್ಟು ;

(ಆ) ಈ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಹೆಚ್ಚಿನ ಬಸ್ಸುಗಳ ಅವಶ್ಯಕತೆ ಇರುವುದು ನಿಜವೇ ;

(ಇ) ಸದರಿ ಸಂಸ್ಥೆಯಿಂದ ಕಾರ್ಯಾಚರಣೆ ಮಾಡಲಾಗುತ್ತಿರುವ ಮಾರ್ಗಗಳಿಗೆ ಹೋಲಿಸಿದ್ದಲ್ಲಿ ಬಸ್ಸು ಹಾಗೂ ಸಿಬ್ಬಂದಿ ಕೊರತೆ ಇರುವುದರಿಂದ ಹಾಲಿ ಇರುವ ಚಾಲಕ ಮತ್ತು ನಿರ್ವಾಹಕರುಗಳು ಕೆಲಸದ ಒತ್ತಡ ಹೆಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಒಟ್ಟು ಎಷ್ಟು ಚಾಲಕರು, ನಿರ್ವಾಹಕರುಗಳ ಹುದ್ದೆಗಳು ಖಾಲಿಯಿರುತ್ತದೆ ?

## ಬೀದರ್ ಜಿಲ್ಲಾ ಆಸ್ಪತ್ರೆಗಳ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೨೬ (೧೦೭೦) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯ ಜಿಲ್ಲಾ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ತಾಲ್ಲೂಕು ಆಸ್ಪತ್ರೆಗಳಲ್ಲಿ ಮೂಲಭೂತ ಸೌಕರ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಮೂಲಭೂತ ಸೌಕರ್ಯ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ತಾಲ್ಲೂಕು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

## ಎಸ್.ಸಿ.ಪಿ. ಅಡಿಯಲ್ಲಿ ಅನುದಾನ ಬಿಡುಗಡೆ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೨೭ (೧೦೨೯) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೪–೧೫ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಘೋಷಿಸಲಾಗಿದ್ದ ಹಣ ಎಷ್ಟು ;

(ಆ) ಘೋಷಣೆ ಮಾಡಿದ ಹಣದಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ; ಬಾಕಿ ಉಳಿದಿರುವ ಹಣ ಎಷ್ಟು ;

(ಇ) ಹಾಗಿದ್ದಲ್ಲಿ, ಈ ಹಣವನ್ನು ೨೦೧೫–೧೬ನೇ ಸಾಲಿನ ಬಜೆಟ್‌ನಲ್ಲಿ ವಿಶೇಷ ಘಟಕ ಯೋಜನೆಯಡಿಯಲ್ಲಿ ಘೋಷಿಸಿರುವ ಹಣದಲ್ಲಿ ಸೇರಿಸಲಾಗಿದೆಯೇ ;

(ಈ) ೨೦೧೫–೧೬ನೇ ಸಾಲಿನ ವಿಶೇಷ ಘಟಕ ಯೋಜನೆಯಡಿಯಲ್ಲಿ ಘೋಷಣೆ ಮಾಡಿರುವ ರೂ. ೧೬,೩೫೬/– ಕೋಟಿಗಳ ಮೊತ್ತದಲ್ಲಿ ಹಿಂದಿನ ಸಾಲಿನಲ್ಲಿ ಉಳಿದಿರುವ ಮೊತ್ತ ಎಷ್ಟು ; ೨೦೧೫–೧೬ನೇ ಸಾಲಿನಲ್ಲಿ ಘೋಷಿಸಿರುವ ಮೊತ್ತ ಎಷ್ಟು ? (ವಿವರ ಒದಗಿಸುವುದು)

## ಸಫಾಯಿ ಕರ್ಮಚಾರಿ ರಚನೆ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೯೨೮ (೧೦೨೬) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೫–೧೬ನೇ ಸಾಲಿನ ಬಜೆಟ್‌ನಲ್ಲಿ ಸರ್ಕಾರವು ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲಾಗುವುದೆಂದು ಘೋಷಿಸಲಾಗಿತ್ತೆ ;

(ಆ) ಹಾಗಿದ್ದಲ್ಲಿ, ಈ ನಿಗಮವನ್ನು ಸ್ಥಾಪನೆ ಮಾಡಲಾಗಿದೆಯೇ ;

(ಇ) ಯಾವಾಗ ಸ್ಥಾಪಿಸಲಾಗಿದೆ ; ಎಷ್ಟು ಹಣವನ್ನು ಸರ್ಕಾರ ಮೂಲ ಬಂಡವಾಳವಾಗಿ ನೀಡಿದೆ ?

## ನ್ಯಾನೋ ವಿಜ್ಞಾನ ಹಾಗೂ ತಂತ್ರಜ್ಞಾನದ ಸಮ್ಮೇಳನದ ವೆಚ್ಚ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೯೨೯ (೧೦೩೦) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಳೆದ ಎಂಟು ವರ್ಷಗಳಿಂದ ಬೆಂಗಳೂರು ನ್ಯಾನೋ ವಿಜ್ಞಾನ ಹಾಗೂ ತಂತ್ರಜ್ಞಾನದ ವಾರ್ಷಿಕ ಸಮ್ಮೇಳನವನ್ನು ಯಾವ ಸಂಸ್ಥೆ ನಡೆಸುತ್ತಿದೆ ;

(ಆ) ಕಳೆದ ಎಂಟು ವರ್ಷಗಳಿಂದ ಈ ಕಾರ್ಯಕ್ರಮಕ್ಕೆ ಸರ್ಕಾರ ಪ್ರತಿ ವರ್ಷ ಮಾಡಿದ ಖರ್ಚು ವೆಚ್ಚದ ವಿವರ ನೀಡುವುದು ; (ವರ್ಷವಾರು ಖರ್ಚುಗಳ ವಿವರ, ಅನುದಾನದ ವಿವರ ನೀಡುವುದು)

(ಇ) ಕಳೆದ ಎಂಟು ವರ್ಷಗಳಲ್ಲಿ ಎಷ್ಟು ಉಚಿತ ಪಾಸ್‌ಗಳನ್ನು ನೀಡಲಾಗಿದೆ ;

(ಈ) ಕಳೆದ ಎಂಟು ವರ್ಷಗಳಲ್ಲಿ ಯಾರ್‍ಯಾರಿಗೆ ಸರ್ಕಾರದ ವತಿಯಿಂದ ಪ್ರಯಾಣ ಭತ್ಯೆ, ಸ್ವೀಕರ್ ವೆಚ್ಚ ವಸತಿ ವೆಚ್ಚ ನೀಡಲಾಗಿದೆ ? (ಪ್ರತಿ ವ್ಯಕ್ತಿ, ಹುದ್ದೆ, ದೇಶಗಳ ವಿವರ ನೀಡುವುದು)

## ಲ್ಯಾಪ್‌ಟಾಪ್‌ಗಳನ್ನು ವಿತರಣೆ ಮಾಡಿರುವ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೯೩೦ (೧೦೨೮) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೫–೨೦೧೬ನೇ ಸಾಲಿನ ಮುಂಗಡ ಪತ್ರದಲ್ಲಿ ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡುವುದಾಗಿ ಘೋಷಣೆ ಮಾಡಲಾಗಿತ್ತೆ ;

(ಆ) ಹಾಗಿದ್ದಲ್ಲಿ, ಇದುವರೆವಿಗೆ ಎಷ್ಟು ಫಲಾನುಭವಿಗಳಿಗೆ ಲ್ಯಾಪ್‌ಟಾಪ್ ನೀಡಲಾಗಿದೆ ;

(ಇ) ಯಾವ ಯಾವ ಜಿಲ್ಲೆಗಳಲ್ಲಿ ಲ್ಯಾಪ್‌ಟಾಪ್ ಸೌಲಭ್ಯವನ್ನು ನೀಡಲಾಗಿದೆ ? (ವಿವರ ಒದಗಿಸುವುದು)

## ದೇವದಾಸಿಯರ ಸಬಲೀಕರಣ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು):–**

೯೩೧ (೯೯೩) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಇದುವರೆಗೆ ಒಟ್ಟು ಎಷ್ಟು ಮಂದಿ ದೇವದಾಸಿಯರನ್ನು ಗುರುತಿಸಲಾಗಿದೆ ; ಅವರುಗಳು ಯಾರು, ಯಾರು ; ಅವರುಗಳು ಎಲ್ಲೆಲ್ಲಿದ್ದಾರೆ ; (ವ್ಯಕ್ತಿವಾರು ವಿವರ ನೀಡುವುದು)

(ಆ) ದೇವದಾಸಿಯರ ಮತ್ತು ಅವರ ಮಕ್ಕಳ ಸಬಲೀಕರಣಕ್ಕೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಇ) ಅವರಿಗೆ ಒದಗಿಸಿರುವ ಸೌಲಭ್ಯಗಳಾವುವು ?

## ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನಗಳಡಿ ಸಂಸ್ಥೆಗಳು

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು):–**

೯೩೨ (೯೯೪) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳು ಯಾವುವು ; ಅವುಗಳು ಎಲ್ಲೆಲ್ಲಿ ಇವೆ ; (ಸಂಸ್ಥೆವಾರು ಮಾಹಿತಿ ನೀಡುವುದು)

(ಆ) ಈ ಸಂಸ್ಥೆಗಳಿಗೆ ಸರ್ಕಾರದಿಂದ ಒದಗಿಸಿರುವ ಸೌಲಭ್ಯಗಳಾವುವು ; (ಸಂಸ್ಥೆವಾರು ವಿವರ ನೀಡುವುದು)

(ಇ) ಯಾವ ಯಾವ ಸಂಸ್ಥೆಯಲ್ಲಿ ಎಷ್ಟೆಷ್ಟು ಜನ ಉದ್ಯೋಗಿಗಳು ಕಾರ್ಯನಿರ್ವಹಿಸುತ್ತಿದ್ದಾರೆ ; ಆ ಉದ್ಯೋಗ ಸೃಷ್ಟಿಯಲ್ಲಿ ಸಾಮಾಜಿಕ ನ್ಯಾಯ ಪರಿಪಾಲನೆ ಮಾಡಲಾಗುತ್ತಿದೆಯೇ ; ಇಲ್ಲದಿದ್ದಲ್ಲಿ ಅಂತಹ ಸಂಸ್ಥೆಗಳ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು ?

## "ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ"

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು):–**

೯೩೩ (೯೯೬) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೩–೧೪, ೨೦೧೪–೧೫ ಮತ್ತು ೨೦೧೫–೧೬ನೇ ಸಾಲುಗಳಲ್ಲಿ ರಾಜ್ಯಲ್ಲಿ "ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ"ಯಡಿ ಮಂಜೂರಾದ ಅನುದಾನ ಎಷ್ಟು ;

(ಆ) ಈ ಅನುದಾನವನ್ನು ಯಾವ ಯಾವ ಬಾಬ್ತುಗಳಿಗೆ ಉಪಯೋಗಿಸಿಕೊಳ್ಳಬಹುದಾಗಿದೆ ; ಅದಕ್ಕೆ ವಿಧಿಸುವ ನಿಯಮಾವಳಿಗಳೇನು ;

(ಇ) ಶಾಸಕರು ಸದರಿ ಅನುದಾನದಡಿ ಸೂಚಿಸಿದ ಕಾಮಗಾರಿಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸುವ ಜವಾಬ್ದಾರಿಯನ್ನು ಯಾರಿಗೆ ವಹಿಸಲಾಗಿದೆ ;

(ಈ) ಶಾಸಕರು ಅನುದಾನ ಒದಗಿಸಲು ಸೂಚಿಸಿದ ಎಷ್ಟು ಕಾಲಮಿತಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕು ; ಪೂರ್ಣಗೊಳಿಸದಿದ್ದಲ್ಲಿ, ಯಾರ ಮೇಲೆ ಕ್ರಮ ಜರುಗಿಸಬೇಕು ? (ವಿವರ ನೀಡುವುದು)

## ಸರ್ಕಾರಿ ಮತ್ತು ಖಾಸಗಿ ಅಸ್ಪತ್ರೆಗಳಲ್ಲಿ ಲಭ್ಯವಿರುವ ಚಿಕಿತ್ಸಾ ಸೇವೆಗಳು

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು):–**

೯೩೪ (೯೯೭) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಎಷ್ಟು ದರ್ಜೆಯ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಿವೆ ; ಅವು ಯಾವುವು ಮತ್ತು ಎಲ್ಲೆಲ್ಲಿವೆ ; (ವಿವರ ನೀಡುವುದು)

(ಆ) ಈ ಆಸ್ಪತ್ರೆಗಳಲ್ಲಿ ಲಭ್ಯವಾಗುವ ವಿವಿಧ ಸೇವೆಗಳು ಯಾವುವು ; ಯಾವ ಯಾವ ಸೇವೆ/ಚಿಕಿತ್ಸೆಗೆ (ಸರ್ಕಾರಿ/ಖಾಸಗಿ ಆಸ್ಪತ್ರೆಗಳಲ್ಲಿ) ಎಷ್ಟೆಷ್ಟು ದರ ನಿಗಧಿಪಡಿಸಲಾಗಿದೆ ; ಹಾಗೆ ನಿಗಧಿಪಡಿಸಿದ್ದಲ್ಲಿ, ಪೂರ್ಣ ಮಾಹಿತಿ ನೀಡುವುದು ; ಇಲ್ಲವಾದಲ್ಲಿ ಕಾರಣಗಳೇನು ;

(ಇ) ಖಾಸಗಿ ಆಸ್ಪತ್ರೆಗಳಲ್ಲಿ ರೋಗಿಗಳಿಂದ ದುಬಾರಿ ವೆಚ್ಚನ್ನು ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಯಾವ ಕ್ರಮುಗಳನ್ನು ಯಾರ್ಯಾರ ಮೇಲೆ ತೆಗೆದುಕೊಳ್ಳಲಾಗಿದೆ ? (ವಿವರ ನೀಡುವುದು)

## ಲಿಂಗಾನುಪಾತದ ಸಮತೋಲನ ಕಾಪಾಡುವಿಕೆ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು):–**

೯೩೫ (೯೯೫) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಯಾವ ಯಾವ ತಾಲ್ಲೂಕುಗಳಲ್ಲಿ ಲಿಂಗಾನುಪಾತದ ರೀತ್ಯಾ ಹೆಣ್ಣು ಮತ್ತು ಗಂಡು ಮಕ್ಕಳ ಸಂಖ್ಯೆ ಎಷ್ಟೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಹೆಣ್ಣು ಮತ್ತು ಗಂಡಿನ ಲಿಂಗಾನುಪಾತ ಏರು–ಪೇರಾಗಲು ಕಾರಣಗಳೇನು ; ಇದರ ಬಗ್ಗೆ ಅಧ್ಯಯನ ನಡೆಸಲಾಗಿದೆಯೇ ; ನಡೆಸಿದ್ದಲ್ಲಿ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಲಿಂಗಾನುಪಾತದ ಸಮತೋಲನ ಕಾಪಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

## ಮಹಿಳಾ ಸಾಂತ್ವನ ಕೇಂದ್ರಗಳ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೯೩೬ (೧೦೦೭) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಹಿಳಾ ಸಾಂತ್ವನ ಕೇಂದ್ರಗಳು ಹಾಲಿ ಎಷ್ಟು ತಾಲ್ಲೂಕುಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಒಂದು ತಾಲ್ಲೂಕಿಗೆ ಎಷ್ಟು ಮಹಿಳಾ ಸಾಂತ್ವನ ಕೇಂದ್ರಗಳಿವೆ ; ಈ ಕೇಂದ್ರಗಳಿಂದ ೨೦೧೫-೧೬ನೇ ಸಾಲಿನಲ್ಲಿ ಈವರೆಗೆ ಅನುಕೂಲ ಪಡೆದುಕೊಂಡವರೆಷ್ಟು ? (ತಾಲ್ಲೂಕುವಾರು ವಿವರಗಳನ್ನು ನೀಡುವುದು)

## ಅನುಕಂಪದ ಆಧಾರದ ಮೇಲೆ ನೇಮಕಾತಿ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೯೩೭ (೧೦೦೬) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಸಹಾಯಕರ ನೇಮಕಾತಿ ಪ್ರಕ್ರಿಯೆಯು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ವಿಷಯವಾಗಿ ತ್ವರಿತಗತಿಯಲ್ಲಿ ನೇಮಕಾತಿ ಮಾಡಲು ಕೈಗೊಂಡಿರುವ ಕ್ರಮಗಳೇನು ; ಪ್ರಸ್ತುತ ಈ ವಿಷಯವು ಯಾವ ಹಂತದಲ್ಲಿದೆ ;

(ಇ) ದ್ವಿತೀಯ ದರ್ಜೆ ಸಹಾಯಕರ ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ಬಂದಿರುವ ಮನವಿಗಳೆಷ್ಟು ; ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು ; (ವಿವರ ಒದಗಿಸುವುದು)

(ಈ) ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿದಲ್ಲಿ ಇವರುಗಳಿಗೆ ಸ್ಥಳ ನಿಯುಕ್ತಿಗೊಳಿಸಲು ಇರುವ ಮಾನದಂಡಗಳೇನು ? (ವಿವರ ನೀಡುವುದು)

# ಬೆಂಗಳೂರಿನ ವಾತಾವರಣಕ್ಕೆ ಬಯೋ ಏರೋಸೋಲ್ಸ್ ವೈರಸ್ ಸೇರ್ಪಡೆಯಾಗುತ್ತಿರುವ ಬಗ್ಗೆ

**ಶ್ರೀ ಲಹರ್ ಸಿಂಗ್ ಸಿರೋಯಾ (ನಾಮನಿರ್ದೇಶನ ಹೊಂದಿದವರು):–**

೯೩೮ (೯೯೨) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರದಲ್ಲಿ ತಲೆದೋರಿರುವ ಕಸದ ಸಮಸ್ಯೆಯಿಂದ ಹಾಗೂ ಲ್ಯಾಂಡ್‌ಪಿಲ್‌ಗಳಿಂದಾಗಿ ಬಯೋ ಏರೋಸೋಲ್ಸ್ ಬೆಂಗಳೂರಿನ ವಾತಾವರಣಕ್ಕೆ ಸೇರ್ಪಡೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇಂತಹ ಬಯೋ ಏರೋಸೋಲ್ಸ್‌ಗಳ ಸೇರ್ಪಡೆಯಿಂದಾಗಿ ಹೊಸ ಹೊಸ ಬ್ಯಾಕ್ಟೀರಿಯಾಗಳು, ವೈರಸ್‌ಗಳು ಉತ್ಪತ್ತಿಯಾಗಿ ಜನರಿಗೆ ವಿವಿಧ ರೀತಿಯ ಅನಾರೋಗ್ಯ ಉಂಟು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಇಂತಹ ಬ್ಯಾಕ್ಟೀರಿಯಾಗಳ ಬಗ್ಗೆ ಜನರಲ್ಲಿ ಯಾವ ರೀತಿಯ ಮುಂಜಾಗ್ರತೆ ಹಾಗೂ ಅರಿವು ಮೂಡಿಸಲಾಗುತ್ತಿದೆ ? (ವಿವರ ನೀಡುವುದು)

# ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿರುವ ಬಸ್ಸುಗಳ ಬಗ್ಗೆ

**ಶ್ರೀ ಲಹರ್ ಸಿಂಗ್ ಸಿರೋಯಾ (ನಾಮನಿರ್ದೇಶನ ಹೊಂದಿದವರು):–**

೯೩೯ (೯೯೧) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿರುವ ಬಸ್ಸುಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಪ್ರತಿ ವರ್ಷ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಇಂಧನ ಉಳಿತಾಯ ಮಾಸಿಕವನ್ನು ಆಚರಿಸಲಾಗುತ್ತಿದೆಯೇ ; (ವಿವರ ನೀಡುವುದು)

(ಇ) ಕಳೆದ ಐದು ವರ್ಷಗಳಲ್ಲಿ ಇಂದನ ಉಳಿತಾಯ ಮಾಸಿಕ ಸಂದರ್ಭದಲ್ಲಿ ನಿಗಧಿಪಡಿಸಿದ ಗುರಿ ಹಾಗೂ ಸಾಧಿಸಿದ ಪ್ರಗತಿ ಏನು ; (ಸಂಪೂರ್ಣ ವಿವರ ನೀಡುವುದು)

(ಈ) ಇಂದನ ಉಳಿತಾಯ ಮಾಸಿಕದ ಆಚರಣೆಗೆ ಕಳೆದ ೫ ವರ್ಷಗಳಲ್ಲಿ ಖರ್ಚು ಮಾಡಿದ ಮೊತ್ತವೆಷ್ಟು ? (ವಿವರ ನೀಡುವುದು)

## ರಾಜ್ಯದಲ್ಲಿರುವ KSRTC/BMTC ಬಸ್ಸುಗಳ ಚಾಲಕರ/ನಿರ್ವಾಹಕರ ಬಗ್ಗೆ

**ಶ್ರೀ ನಾರಾಯಣ ಸಾ. ಕೆ. ಬಾಂಡಗೆ (ವಿಧಾನಸಭೆಯಿಂದ ಚುನಾಯಿತರಾದವರು):–**

೯೪೦ (೧೦೩೫) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ KSRTC/BMTC ಸಂಸ್ಥೆಗಳಲ್ಲಿರುವ ವಾಹನ ಚಾಲಕರು ಹಾಗೂ ನಿರ್ವಾಹಕರುಗಳ ಸಂಖ್ಯೆ ಎಷ್ಟು ;

(ಆ) ಇವರುಗಳಿಗೆ ಒಂದು ವಿಭಾಗದಿಂದ ಮೊತ್ತೊಂದು ವಿಭಾಗಕ್ಕೆ ವರ್ಗಾವಣೆ ಬಯಸಲು ಅನುಮತಿ ಇದೆಯೇ ; ಅನುಮತಿ ಇದ್ದರೆ ವರ್ಗಾವಣೆಯಾಗಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ? (ವಿಭಾಗವಾರು ಮಾಹಿತಿ ನೀಡುವುದು)

## ಕೇಂದ್ರ ಸರ್ಕಾರದಿಂದ ಮಂಜೂರಾಗಿರುವ ಅಂಗನವಾಡಿಗಳ ಬಗ್ಗೆ

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು):–**

೯೪೧ (೧೦೮೨) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೪–೧೫ನೇ ಸಾಲಿಗೆ ಒಟ್ಟು ೧೩೯೩ ಅಂಗನವಾಡಿ ಕೇಂದ್ರಗಳನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ ಇದರಲ್ಲಿ ಅಲ್ಪಸಂಖ್ಯಾತರಿಗೆ ಒಟ್ಟು ೫೦೫ ಉರ್ದು ಅಂಗನವಾಡಿ ಕೇಂದ್ರಗಳಾಗಿದ್ದು ಇದರಲ್ಲಿ ಯಾವ ಯಾವ ಜಿಲ್ಲೆಗಳಿಗೆ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಿದೆ ; ಇದರಲ್ಲಿ ಬಾಕಿ ಇರುವ ಸಂಖ್ಯೆಗಳು ಎಷ್ಟು ; (ಜಿಲ್ಲಾ ಹಾಗೂ ತಾಲ್ಲೂಕುವಾರು ಪೂರ್ಣ ವಿಳಾಸದೊಂದಿಗೆ ಮಾಹಿತಿ ನೀಡುವುದು)

(ಇ) ೨೦೧೪–೧೫ನೇ ಸಾಲಿನ ನಂತರ ಕೇಂದ್ರ ಸರ್ಕಾರದಿಂದ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆಯೇ ; ಮಂಜೂರು ಮಾಡಿದ್ದರೆ, ಇದರಲ್ಲಿ ಉರ್ದು ಅಂಗನವಾಡಿ ಕೇಂದ್ರಗಳು ಎಷ್ಟು ? (ಮಾಹಿತಿ ನೀಡುವುದು)

## ಹಳೆ ದಾವಣಗೆರೆ ನಗರದ ಹೆರಿಗೆ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು):–**

೯೪೨ (೧೦೮೧) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಾವಣಗೆರೆ ತಾಲ್ಲೂಕು ಹಾಗೂ ಜಿಲ್ಲೆಯ ಹಳೆ ದಾವಣಗೆರೆ ನಗರದಲ್ಲಿರುವ ಹೆರಿಗೆ ಆಸ್ಪತ್ರೆಯಲ್ಲಿ ವೈದ್ಯರು, ನರ್ಸ್, ಆಯಾ ಹಾಗೂ ಸಿಬ್ಬಂದಿಗಳ ಕೊರತೆ ಮತ್ತು ಮೂಲಭೂತ ಸೌಲಭ್ಯಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಆ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ ೧೦೦ ಹಾಸಿಗೆಯ ಸುಸ್ಸಜಿತವಾದ ಆಸ್ಪತ್ರೆಯನ್ನಾಗಿಸಲು ಹಿಂದಿನ ಸಾಲಿನ ಆಯವ್ಯಯದಲ್ಲಿ ಪ್ರಸ್ತಾಪಿಸಲಾಗಿದ್ದು ನಿಜವೇ ;

(ಇ) ಹಾಗಿದ್ದಲ್ಲಿ, ಸದರಿ ಕಾರ್ಯವು ಯಾವ ಹಂತದಲ್ಲಿ ಇದೆ ; ಇದಕ್ಕೆ ಸರ್ಕಾರ ಬಿಡುಗಡೆ ಮಾಡಿರುವ ಹಣ ಎಷ್ಟು ; ಬಿಡುಗಡೆ ಮಾಡಿದ್ದರೆ ಯಾವ ಸಮಯದಲ್ಲಿ ಪೂರ್ಣಗೊಳಿಸಲಾಗುವುದು?

## ೧೦೮ರಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಬಗ್ಗೆ

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು):–**

೯೪೩ (೧೦೩೭) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಆಂಬ್ಯುಲೆನ್ಸ್ ೧೦೮ರಲ್ಲಿ ಕಾರ್ಯ ನಿರ್ವಹಿಸುತ್ತಿರುವವರಲ್ಲಿ ಎಷ್ಟು ಜನ ಪುರಷ ಹಾಗೂ ಮಹಿಳಾ ಸಿಬ್ಬಂದಿಗಳು ಸೇವೆಯನ್ನು ಸಲ್ಲಿಸುತ್ತಿದ್ದಾರೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಕಳೆದ ಮೂರು ವರ್ಷದಲ್ಲಿ ೧೦೮ ಸೇವೆಯಿಂದ ಜೀವವನ್ನು ಉಳಿಸಿಕೊಂಡಿರುವ ಪುರುಷ ಹಾಗೂ ಮಹಿಳಾ ರೋಗಿಗಳ ಫಲಾನುಭವಿಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

## ಗಂಗಾ ಕಲ್ಯಾಣ ಯೋಜನೆ ಬಗ್ಗೆ

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು):–**

೯೪೪ (೧೦೩೬) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೨ ವರ್ಷಗಳಿಂದ ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳ ವ್ಯಾಪ್ತಿಯಲ್ಲಿ ಹಿಂದುಗಳಿದ ವರ್ಗದವರಿಗೆ ಹಿಂದುಳಿದ ವರ್ಗಗಳ ಇಲಾಖೆ ಮತ್ತು ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊರೆಸಿರುವ ಕೊಳವೆ ಬಾವಿಗಳೆಷ್ಟು ;

(ಆ) ಈ ಕೊಳವೆ ಬಾವಿಗಳಲ್ಲಿ ಸಮರ್ಪಕವಾಗಿ ನೀರು ದೊರೆತಿರುವ ಕೊಳವೆ ಬಾವಿಗಳೆಷ್ಟು ; ಹಾಗೂ ನೀರು ದೊರೆಯದೆ ವಿಫಲವಾಗಿರುವ ಕೊಳವೆ ಬಾವಿಗಳೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ನೀರು ದೊರೆತಿರುವ ಎಷ್ಟು ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕವನ್ನು ಒದಗಿಸಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಈ) ಇನ್ನೂ ಎಷ್ಟು ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕವನ್ನು ಒದಗಿಸಬೇಕಾಗಿರುತ್ತದೆ ? (ತಾಲ್ಲೂಕುವಾರು ವಿವರ ನೀಡುವುದು)

## ಕಲಬುರಗಿ ಜಿಲ್ಲೆಯ ಅಂಗವಿಕಲರ ಪಿಂಚಣಿ ಸಂಬಂಧಿಸಿದಂತೆ

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ (ನಾಮನಿರ್ದೇಶನ ಹೊಂದಿದವರು):–**

೯೪೫ (೧೦೩೮) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಜಿಲ್ಲೆಯಲ್ಲಿ ಅಂಗವಿಕಲರ ಪಿಂಚಣಿ ಪಡೆಯುತ್ತಿರುವ ಪಿಂಚಣಿದಾರರೆಷ್ಟು ; (ತಾಲ್ಲೂಕುವಾರು ವಿವರ ಒದಗಿಸುವುದು)

(ಆ) ಪ್ರಸ್ತುತ ವರ್ಷದಲ್ಲಿ ಹೊಸದಾಗಿ ಪಿಂಚಣಿ ಪಡೆಯಲು ಅರ್ಜಿಗಳು ಬಂದಿದೆಯೇ ;

(ಇ) ಸದರಿ ಪಿಂಚಣಿ ಯೋಜನೆಯಡಿಯಲ್ಲಿ ಒಬ್ಬರಿಗೆ ಪಾವತಿಸುವ ಮೊತ್ತವೆಷ್ಟು ; ಇವರ ಪಿಂಚಣಿ ಪಾವತಿಗೆ ತಗಲುವ ವಾರ್ಷಿಕ ಮೊತ್ತ ಎಷ್ಟು ?

## ಹೆಗ್ಗಡದೇವನ ಕೋಟೆಯಲ್ಲಿ ಅಂಬೇಡ್ಕರ್ ಭವನ ನಿರ್ಮಾಣ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೯೪೬ (೧೦೭೬) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೆಗ್ಗಡದೇವನ ಕೋಟೆಯಲ್ಲಿ ಅಂಬೇಡ್ಕರ್ ಭವನದ ಕಾಮಗಾರಿ ಯಾವಾಗ ಆರಂಭವಾಯಿತು ಇದರ ಅಂದಾಜು ವೆಚ್ಚ ಎಷ್ಟು ; ಕಾಮಗಾರಿ ಯಾವ ಹಂತದಲ್ಲಿದೆ ಇನ್ನೂ ಆಗಬೇಕಾಗಿರುವ ಕಾಮಗಾರಿಗಳು ಯಾವುವು ಇದುವರೆಗೆ ಆಗಿರುವ ವೆಚ್ಚ ಇನ್ನೂ ಬೇಕಾಗಿರುವ ಅನುದಾನ ಎಷ್ಟು ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ;

(ಆ) ತಾಲ್ಲೂಕಿನ ಹಂಪಾಪುರ ಸರಗೂರು ಅಂತರಸಂತೆ ಹೋಬಳಿ ಕೇಂದ್ರಗಳಲ್ಲಿ ಅಂಬೇಡ್ಕರ್ ಭವನಗಳ ನಿರ್ಮಾಣ ಕಾಮಗಾರಿ ಯಾವ ಹಂತದಲ್ಲಿದೆ ಇವುಗಳಿಗೆ ಬಿಡುಗಡೆ ಆಗಿರುವ ಅನುದಾನ ಎಷ್ಟು ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ;

(ಇ) ಕೊಳ್ಳೇಗಾಲದಲ್ಲಿ ಅಂಬೇಡ್ಕರ್ ಭವನದ ಕಾಮಗಾರಿ ಯಾವಾಗ ಆರಂಭಿಸಲಾಯಿತು ಇನ್ನೂ ಪೂರ್ಣಗೊಳ್ಳದೇ ಇರಲು ಕಾರಣಗಳೇನು ಎನ್ನೂ ಯಾವ ಯಾವ ಕಾಮಗಾರಿಗಳು ಆಗಬೇಕಾಗಿದೆ ಎಷ್ಟು ಅನುದಾನ ಅವಶ್ಯವಿದೆ ಪ್ರಸಕ್ತ ವರ್ಷದಲ್ಲಿ ಇದನ್ನು ಪೂರ್ಣಗೊಳಿಸಿ ಸಾರ್ವಜನಿಕರಿಗೆ ಒದಗಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ?

## ಬೆಂಬಲ ಬೆಲೆಯಲ್ಲಿ ಭತ್ತ ಮತ್ತು ಇತರೆ ಆಹಾರ ಧಾನ್ಯಗಳ ಖರೀದಿ ಬಗ್ಗೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೯೪೭ (೧೦೭೭) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಪ್ರಸಕ್ತ ಹಂಗಾಮಿನಲ್ಲಿ ಬೆಂಬಲ ಬೆಲೆಯಲ್ಲಿ ಖರೀದಿಸಿರುವ ಭತ್ತ ಹಾಗೂ ಇತರೆ ಆಹಾರ ಧಾನ್ಯಗಳ ಪ್ರಮಾಣ ಎಷ್ಟು ; ಇವುಗಳ ಮೌಲ್ಯ ಎಷ್ಟು ರೈತರಿಗೆ ನೀಡಿರುವ ಹಣ ಎಷ್ಟು ; ಬಾಕಿ ಕೊಡಬೇಕಾದ ಹಣ ಎಷ್ಟು ; (ತಾಲ್ಲೂಕುವಾರು ವಿವರ ಒದಗಿಸುವುದು)

(ಆ) ರೈತರಿಗೆ ನೀಡಬೇಕಾಗಿರುವ ಬಾಕಿ ಹಣವನ್ನು ಕೂಡಲೇ ಪಾವತಿಸಲು ಕ್ರಮ ಜರುಗಿಸಲಾಗುವುದೇ ಆಹಾರ ಧಾನ್ಯ ಖರೀದಿಯ ತೂಕದಲ್ಲಿ ಮೋಸದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ಯೆಳಂದೂರು ತಾಲ್ಲೂಕಿನ ರೈತರು ತೂಕದಲ್ಲಿ ಮೋಸ ಆಗಿರುವ ಬಗ್ಗೆ ದೂರನ್ನು ನೀಡಿರುವುದು ಗಮನಕ್ಕೆ ಬಂದಿದೆಯೇ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ?

## ITDC ಬಸ್ಸುಗಳ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೯೪೮ (೧೦೯೧) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಪ್ರತಿ ದಿನ ITDC (India Tourist Development Corporation) ನಿಗಮದ ಎಷ್ಟು ಬಸ್‌ಗಳು ಸಂಚರಿಸುತ್ತಿವೆ ;

(ಆ) ಈ ಬಸ್ಸುಗಳ ಸರ್ಕಾರದ ITDC ನಿಗಮಕ್ಕೆ ಸೇರಿದ್ದವೇ ಅಥವಾ ಖಾಸಗಿ ಸಂಸ್ಥೆಗೆ ಸೇರಿದ ಬಸ್ಸುಗಳೇ ; (ವಿವರ ನೀಡುವುದು)

(ಇ) ಈ ಬಸ್ಸುಗಳ ಮೇಲೆ ITDC (India Tourist Development Corporation) ಮತ್ತು ಕೇಂದ್ರ ಸರ್ಕಾರದ ನಿಗಮದ ಲೋಗೊ ಇರುವುದು ನಿಜವೇ ;

(ಈ) ಈ ರೀತಿ ಕೇಂದ್ರ ಸರ್ಕಾರದ ನಿಗಮದ ಲೋಗೊ ಬಳಸಲು ಬಸ್ಸುಗಳ ನಿಯಮಾನುಸಾರ ಅನುಮತಿ ಪಡೆದಿವೆಯೇ ; (ಸಂಪೂರ್ಣವಾಗಿ ವಿವರ ನೀಡುವುದು)

(ಉ) ಬಸ್ಸುಗಳ ಮೇಲೆ ಸರ್ಕಾರದ ನಿಗಮದ ಲೋಗೊ ಹಾಗೂ ಹೆಸರು ಬಳಸಲು ಇರುವ ನೀತಿ ನಿಯಮಗಳೇನು ? (ವಿವರ ನೀಡುವುದು)

## ಪಡಿತರ ಕಾರ್ಡುಗಳ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೯೪೯ (೧೦೯೩) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪಡಿತರ ಕಾರ್ಡುಗಳಲ್ಲಿ ಎಷ್ಟು ವಿಧಗಳಿವೆ ; ಅವುಗಳು ಯಾವುವು ;

(ಆ) ಇವುಗಳನ್ನು ಜನರಿಗೆ ನೀಡಲು ಸರ್ಕಾರ ನಿಗಧಿಪಡಿಸಿರುವ ಮಾನದಂಡಗಳೇನು ; (ಕಾರ್ಡುವಾರು ವಿವರವಾದ ಮಾಹಿತಿ ನೀಡುವುದು)

(ಇ) ಸರ್ಕಾರವು ಪ್ರತಿ ಒಂದು ಕೆ.ಜಿ. ಪಡಿತರಕ್ಕೆ ಖಚು ಮಾಡುತ್ತಿರುವ ಹಣ ಎಷ್ಟು ; ಅದೇ ಒಂದು ಕೆ.ಜಿ. ಪಡಿತರವನ್ನು ಎಷ್ಟು ಬೆಲೆಗೆ ಜನರಿಗೆ ನೀಡುತ್ತಿವೆ ; (ಪಡಿತರವಾರು ವಿವರವಾದ ಮಾಹಿತಿ ಕೊಡುವುದು)

(ಈ) ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು, ಕಸಬಾ ಹೋಬಳಿ, ಎಸ್. ಕೊಡಗೀಹಳ್ಳಿ ಗ್ರಾಮದ VSSN ನ್ಯಾಯಬೆಲೆ ಅಂಗಡಿಗೆ ಎಷ್ಟು ಕಾರ್ಡು ಹಂಚಿಕೆ ಮಾಡಲಾಗಿದೆ ? (ಸಂಪೂರ್ಣವಾದ ಮಾಹಿತಿ ನೀಡುವುದು)

## ಯೋಜನೆಗಳಿಗೆ ನಿಗಧಿಪಡಿಸಿರುವ ಹಣ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೬೫೦ (೧೯೬೨) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಯಾವ ಯಾವ ನಿಗಮ, ಮಂಡಳಿ, ಕೇಂದ್ರ, ಇತರೆ ಸಂಸ್ಥೆಗಳು ಬರುತ್ತವೆ ;

(ಆ) ಸದರಿ ಸಂಸ್ಥೆ/ನಿಗಮಗಳಡಿ ಹಾಲಿ ಜಾರಿಯಲ್ಲಿರುವ ಯೋಜನೆಗಳಾವುವು ; (ಯೋಜನಾವಾರು ವಿವರವಾದ ಮಾಹಿತಿ ಕೊಡುವುದು)

(ಇ) ಸದರಿ ಸಂಸ್ಥೆ/ನಿಗಮಗಳಿಗೆ ೨೦೧೫–೧೬ನೇ ಸಾಲಿನಲ್ಲಿ ಎಷ್ಟು ಹಣ ನೀಡಲಾಗಿದೆ ; ಇದರಲ್ಲಿ ಖರ್ಚು ಮಾಡಿರುವ ಹಣ ಎಷ್ಟು ; ಉಳಿದಿರುವ ಹಣವೆಷ್ಟು ; (ಯೋಜನಾವಾರು ವಿವರವಾದ ಮಾಹಿತಿ ಕೊಡುವುದು)

(ಈ) ಯೋಜನೆಗಳಿಗೆ ನಿಗಧಿಪಡಿಸಿರುವ ಹಣ ಉಳಿಯಲು ಕಾರಣಗಳೇನು ? (ವಿವರವಾಗಿ ಮಾಹಿತಿ ನೀಡುವುದು)

## ಕಲಾವಿದರು ಮತ್ತು ಸಂಘ ಸಂಸ್ಥೆಗಳಿಂದ ಸ್ವೀಕೃತವಾಗಿರುವ ದೂರುಗಳ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೯೫೧ (೧೧೯೪) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲಿಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧೀನದಲ್ಲಿ ಬರುವ ನಿಗಮ/ಮಂಡಳಿ/ಆಕಾಡೆಮಿ ಇತರೆ ಸಂಸ್ಥೆಗಳು ಯಾವುವು ; ಇವುಗಳಿಗೆ ಅಧ್ಯಕ್ಷಕರುಗಳನ್ನು ನೇಮಕ ಮಾಡಲಾಗಿದೆಯೇ ; ಮಾಡಲಾಗಿದ್ದರೆ, ಅಧ್ಯಕ್ಷರ ಹೆಸರು, ಅವಧಿಯ ವಿವರ ನೀಡುವುದು ;

(ಆ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಮಂಜೂರಾದ ಹುದ್ದೆ ಎಷ್ಟು ; ಹಾಲಿ, ಖಾಲಿ ಇರುವ ಹುದ್ದೆಗಳು ಎಷ್ಟು ; (ಹುದ್ದೆಯ ಪದನಾಮ, ವೇತನಶ್ರೇಣಿ, ವಿದ್ಯಾರ್ಹತೆ ಒಳಗೊಂಡಂತೆ ಮಾಹಿತಿ ಕೊಡುವುದು)

(ಇ) ರಾಜ್ಯದ ಯಾವ ಯಾವ ಜಿಲ್ಲೆಯ ಇಲಾಖೆಯ ಅಧಿಕಾರಿಗಳ ಮೇಲೆ ಕಲಾವಿದರು ಮತ್ತು ಸಂಘ ಸಂಸ್ಥೆಗಳು ದೂರುಗಳನ್ನು ನೀಡಿರುತ್ತಾರೆ ; ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಯೋಜನೆಗಳು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೯೫೨ (೧೮೯೦) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಿಂದುಳಿದ ವರ್ಗಗಳ ಇಲಾಖೆಯ ಅಧೀನದಲ್ಲಿ ಯಾವ ಯಾವ ನಿಗಮ, ಮಂಡಳಿ, ಕೇಂದ್ರ ಇತರೆ ಸಂಸ್ಥೆಗಳು ಬರುತ್ತವೆ ;

(ಆ) ಸದರಿ ಸಂಸ್ಥೆ/ನಿಗಮಗಳಡಿಯಲ್ಲಿ ಹಾಲಿ ಜಾರಿಯಲ್ಲಿರುವ ಯೋಜನೆಗಳಾವುವು ; (ಯೋಜನೆವಾರು ವಿವರವಾದ ಮಾಹಿತಿ ನೀಡುವುದು)

(ಇ) ಸದರಿ ಸಂಸ್ಥೆ/ನಿಗಮಗಳಿಗೆ ೨೦೧೫–೧೬ನೇ ಸಾಲಿನಲ್ಲಿ ಎಷ್ಟು ಹಣ ಒದಗಿಸಲಾಗಿವೆ ; ಇದರಲ್ಲಿ ಖರ್ಚು ಮಾಡಿರುವ ಹಣ ಎಷ್ಟು ; ಉಳಿದಿರುವ ಹಣವೆಷ್ಟು ; (ಯೋಜನೆವಾರು ವಿವರವಾದ ಮಾಹಿತಿ ನೀಡುವುದು)

(ಈ) ಯೋಜನೆಗಳಿಗೆ ನಿಗಧಿಪಡಿಸಿರುವ ಹಣ ಉಳಿಯಲು ಕಾರಣಗಳೇನು ? (ವಿವರವಾದ ಮಾಹಿತಿ ಒದಗಿಸುವುದು)

**ವಿ. ಶ್ರೀಶ್**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. 0 320/1,000 ಪ್ರತಿಗಳು/22–03–2016